# ವಿಜ್ಞಾನವೆಂಬ ವಿಸ್ಮಯ ಲೋಕ

**ನೀ**ನು ಅದೇನೋ ಬರೀತೀಯಂತಲ್ಲ, ಏನು? ಎನ್ನುವುದು ನನ್ನ ಕನ್ನಡ ಬಾರದ ಮಿತ್ರರ ಪೈಕಿ ಹಲವರ ಪ್ರಶ್ನೆ. ವಿಜ್ಞಾನ-ತಂತ್ರಜ್ಞಾನದ ವಿಷಯಗಳನ್ನು ಕನ್ನಡದಲ್ಲಿ ವಿವರಿಸುವ ಪ್ರಯತ್ನ ಮಾಡುತ್ತೇನೆ ಎಂದಷ್ಟೇ ಹೇಳಿದರೆ ಅವರಿಗೆ ಸಮಾಧಾನವಾಗುವುದಿಲ್ಲ. ಇಂಗ್ಲಿಷಿನ ಲೇಖನ ಗಳನ್ನೂ ಪುಸ್ತಕಗಳನ್ನೂ ತೆಗೆದುಕೊಂಡು ಕನ್ನಡಕ್ಕೆ ಅನುವಾದ ಮಾಡ್ತೀಯ, ಅಷ್ಟೇ ತಾನೇ? ಎಂದು ತಿರುಗಿ ನನ್ನನ್ನೇ ಕೇಳುತ್ತಾರೆ. ಈಚೆಗೆ ಅನುವಾದ ತಂತ್ರಾಂಶಗಳು ಚೆನ್ನಾಗಿ ಕೆಲಸ ಮಾಡುತ್ತಿವೆಯಲ್ಲ, ಇನ್ನು ಮುಂದೆ ಅವನ್ನೇ ಬಳಸಬಹುದಲ್ಲ! ಎಂದು ಕೇಳಿದವರೂ ಇದ್ದಾರೆ.




ಇದು ನನ್ನೊಬ್ಬನ ಪರಿಸ್ಥಿತಿಯಷ್ಟೇ ಆಗಿರಲಿಕ್ಕಿಲ್ಲ. ಇಂಗ್ಲಿಷೇತರ ಭಾಷೆಗಳಲ್ಲಿ ಜನಪ್ರಿಯ ವಿಜ್ಞಾನ ಸಂವಹನ ಕೈಗೊಳ್ಳುವ ಬಹುತೇಕರು ಇಂತಹ ಪ್ರಶ್ನೆಯನ್ನು ಎದುರಿಸಿರುತ್ತಾರೆ ಎನ್ನುವುದು ನನ್ನ ಅನಿಸಿಕೆ. ಕನ್ನಡದಲ್ಲಂತೂ ಅನೇಕ ಲೇಖಕರು ಇಂತಹ ಪ್ರಶ್ನೆಗಳನ್ನು ಎದುರಿಸಿರುವುದು ನನಗೆ ಖಚಿತವಾಗಿ ತಿಳಿದಿದೆ.

ಜನಸಾಮಾನ್ಯರಿಗೂ ಅರ್ಥವಾಗುವಂತೆ, ಅವರಲ್ಲೂ ಆಸಕ್ತಿ ಹುಟ್ಟಿಸುವಂತೆ ಪ್ರಸ್ತುತಪಡಿಸಲಾದ ವಿಜ್ಞಾನವೇ ಜನಪ್ರಿಯ ವಿಜ್ಞಾನ ಎಂದು ಕೇಂಬ್ರಿಜ್ ನಿಘಂಟು ಹೇಳುತ್ತದೆ. ಇಂಗ್ಲಿಷಿನಲ್ಲಿ ಇದನ್ನು ಪಾಪ್ಯುಲರ್ ಸೈನ್ಸ್ ಎಂದು ಕರೆಯುತ್ತಾರೆ. ಸಂಶೋಧನಾ ಪ್ರಬಂಧಗಳಂತೆ ನಿರ್ದಿಷ್ಟ ನಿಯಮಗಳನ್ನು ಪಾಲಿಸಬೇಕಾದ, ಸಮಗ್ರ ವಿಮರ್ಶೆಗೆ ಒಳಪಡಬೇಕಾದ ಕಟ್ಟುಪಾಡುಗಳು ಜನಪ್ರಿಯ ವಿಜ್ಞಾನಕ್ಕೆ ಇರುವುದಿಲ್ಲ.

ಇದು ಜನಪ್ರಿಯ ವಿಜ್ಞಾನದ ಶಕ್ತಿಯೂ ಹೌದು, ದೌರ್ಬಲ್ಯವೂ ಹೌದು. ವಿಜ್ಞಾನವನ್ನು ಎಲ್ಲರಿಗೂ ಅರ್ಥವಾಗುವಂತೆ ಹೇಳಬೇಕಾದರೆ ವಿಷಯವನ್ನು ಎಷ್ಟು ತೆಳುವಾಗಿಸಬಹುದು. ಆ ಕೆಲಸವನ್ನು ವಿಜ್ಞಾನಿಗಳಲ್ಲದವರೂ ಮಾಡಬಹುದೋ ಮಾಡಬಾರದೋ. ಇಂತಹ ಪ್ರಶ್ನೆಗಳೂ ಕನ್ನಡದ ವಿಜ್ಞಾನ ಸಂವಹನಕಾರರಿಗೆ ಎದುರಾಗುತ್ತಲೇ ಇರುತ್ತವೆ.

ಇದೇಕೆ ಹೀಗೆ? ಜನಪ್ರಿಯ ವಿಜ್ಞಾನವೇನು ಕನ್ನಡಕ್ಕೆ ಹೊಸದೇ? ಖಂಡಿತಾ ಅಲ್ಲ. ನಮ್ಮ ನಾಡಿನಲ್ಲಿ ಜನಪ್ರಿಯ ವಿಜ್ಞಾನ ಸಂವಹನಕ್ಕೆ ನೂರು ವರ್ಷಗಳಿಗೂ ಮೀರಿದ ಇತಿಹಾಸವಿದೆ. ಈ ಅವಧಿಯಲ್ಲಿ ಅನೇಕ ವಿಜ್ಞಾನಿಗಳು, ತಂತ್ರಜ್ಞರು, ಅಧ್ಯಾಪಕರು, ಪತ್ರಕರ್ತರು ಹಾಗೂ ಹವ್ಯಾಸಿ ಬರಹಗಾರರು ವಿಜ್ಞಾನ ಹಾಗೂ ತಂತ್ರಜ್ಞಾನದ ವಿಷಯಗಳನ್ನು ಕನ್ನಡಕ್ಕೆ ತಂದಿದ್ದಾರೆ. ಜ್ಞಾನಪೀಠ ಪುರಸ್ಕೃತರು ಜನಪ್ರಿಯ ವಿಜ್ಞಾನ ಸಂವಹನ ಕೈಗೊಂಡಿದ್ದು, ಜನಪ್ರಿಯ ವಿಜ್ಞಾನದ ಪುಸ್ತಕವೊಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರಕ್ಕೆ ಪಾತ್ರವಾದದ್ದೂ ಇದೆ. ನಮ್ಮ ನಾಡಿ ನಲ್ಲಿ ಜನಪ್ರಿಯ ವಿಜ್ಞಾನ ಸಂವಹನಕ್ಕೆ ನೂರು ವರ್ಷಗಳಿಗೂ ಮೀರಿದ ಇತಿಹಾಸವಿದೆ.

**ವಿಜ್ಞಾನದ ವಿಶ್ವಕ್ಕೆ ಕನ್ನಡದ ಕಿಟಕಿ**

ಕನ್ನಡ ಸಾಹಿತ್ಯ ಬಹಳ ಸಮೃದ್ಧವಾದದ್ದು. ಹೊಸ ಪ್ರಯತ್ನಗಳಿಗೆ, ಸಾಧನೆಗಳಿಗೆ ನಿಮಗೆ ಪ್ರೇರಣೆ ನೀಡಿದ ಸಾಹಿತ್ಯಕೃತಿ ಯಾವುದೆಂದು ಕೇಳಿದರೆ ಅದಕ್ಕೆ ಉತ್ತರಿಸುವವರೂ ಬೇಕಾದಷ್ಟು ಜನ ಇರಬಹುದು. ಹೀಗೆ ಪ್ರೇರಣೆ ನೀಡುವ ಕೃತಿಗಳ ಸಾಲಿನಲ್ಲಿ ಕನ್ನಡದ ವಿಜ್ಞಾನ ಬರಹಗಳು, ಪುಸ್ತಕಗಳೂ ಇರಬಹುದೇ?

ಜನಪ್ರಿಯ ವಿಜ್ಞಾನದ ಸ್ವರೂಪ ಕುರಿತು ಗೊಂದಲವಿರುವಂತೆಯೇ ಆ ಕುರಿತು ಕೆಲ ಪೂರ್ವ ಗ್ರಹಗಳೂ ಇವೆ. ವಿಜ್ಞಾನದ ಬರಹಗಳು ವಿದ್ಯಾರ್ಥಿಗಳಿಗಷ್ಟೇ ಸೀಮಿತವೆನ್ನುವುದು ಅವುಗಳ ಲ್ಲೊಂದು. ಮಾಹಿತಿ ಕೊಡುವುದಷ್ಟೇ ವಿಜ್ಞಾನ ಬರಹದ ಕೆಲಸ ಎನ್ನುವ ಅಭಿಪ್ರಾಯವೂ ಇದೆ. ವಿಜ್ಞಾನ-ತಂತ್ರಜ್ಞಾನದ ಬರಹಗಳು ಇಷ್ಟಕ್ಕೇ ಸೀಮಿತವಾಗಿಬಿಟ್ಟರೆ ಪ್ರೇರಣೆ ನೀಡುವ ಪ್ರಶ್ನೆಯೇ ಬರುವುದಿಲ್ಲವಲ್ಲ!

ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಬಹಳ ಹಿಂದೆಯೇ ಇಂತಹ ಪೂರ್ವಗ್ರಹಗಳನ್ನೆಲ್ಲ ಮೀರಿ ಬೆಳೆದಿದೆ ಎನ್ನುವುದು ಹೆಮ್ಮೆಯ ವಿಷಯ. ಇಸ್ರೋ ಸಂಸ್ಥೆ ತನ್ನ ಕೆಲಸ ಪ್ರಾರಂಭಿಸಿದ್ದು ತಿರುವ ನಂತಪುರ ಸಮೀಪದ ಒಂದು ಹಳ್ಳಿಯಲ್ಲಿ ಎನ್ನುವುದನ್ನು ನೀವು ಕೇಳಿರಬಹುದು. ಅಂದಿನ ಪರಿಸ್ಥಿತಿ ಹೇಗಿತ್ತೆನ್ನುವ ಬಗ್ಗೆ ವಿವರಗಳನ್ನು ಓದಿ ತಿಳಿಯಬೇಕೆಂದರೆ ಸ್ವತಃ ವಿಕ್ರಂ ಸಾರಾ ಭಾಯಿಯವರೂ ಸೇರಿದಂತೆ ಹಲವರ ಬರಹಗಳು ಇಂಗ್ಲಿಷಿನಲ್ಲಿ ಸಿಗುತ್ತವೆ. ಇಂತಹ ಬರಹ ಗಳು ಕನ್ನಡದಲ್ಲೂ ಇವೆ ಎನ್ನುವುದು ವಿಶೇಷ.

ಇಸ್ರೋ ಆರಂಭದ ದಿನಗಳ ಮಾತು ಬಂದಾಗ ರಾಕೆಟ್ಟಿನ ಮೂತಿಯನ್ನು ಸೈಕಲ್ ಮೇಲಿಟ್ಟುಕೊಂಡು ನಡೆಯುತ್ತಿರುವ ವ್ಯಕ್ತಿಗಳ ಚಿತ್ರವೂ ಸಾಮಾನ್ಯವಾಗಿ ಪ್ರಸ್ತಾಪವಾಗುತ್ತದೆ. ಆ ಚಿತ್ರ ದಲ್ಲಿರುವ ವಿಜ್ಞಾನಿ ಕನ್ನಡದವರೇ ಆದ ಸಿ.ಆರ್.ಸತ್ಯ, ಅಬ್ದುಲ್ ಕಲಾಮ್, ರತನ್ ಟಾಟಾ ಮುಂತಾದವರ ಜೊತೆಗೆಲ್ಲ ಕೆಲಸ ಮಾಡಿದ್ದ ಸಾಧಕರು ಅವರು. ಅವರ ತ್ರಿಮುಖಿ ಕೃತಿಯಲ್ಲಿ ಭಾರತೀಯ ಬಾಹ್ಯಾಕಾಶ ಕ್ಷೇತ್ರ ಪ್ರಾರಂಭಿಕ ವರ್ಷಗಳಲ್ಲಿ ಬೆಳೆದದ್ದು ಹೇಗೆನ್ನುವ ಕುರಿತು ಆಪ್ತವಾದ ಬರಹವಿದೆ. ಮಾಹಿತಿಯಷ್ಟೇ ಅಲ್ಲ, ಸೀಮಿತ ಸಂಪನ್ಮೂಲಗಳನ್ನೇ ಬಳಸಿಕೊಂಡು ಅದ್ಭುತ ಸಾಧನೆ ಮಾಡಿದವರ ಪ್ರೇರಣಾದಾಯಕ ಕಥನವೂ ಅಲ್ಲಿದೆ!

ಸತ್ಯ ಅವರ ಇನ್ನೊಂದು ಕೃತಿ ಅಳಿವಿಲ್ಲದ ಸ್ಥಾವರ, ಅವರು ತಿರುವನಂತಪುರದಲ್ಲಿದ್ದಾಗ ಅಲ್ಲಿನ ಅನಂತಪದ್ಮನಾಭ ದೇವಸ್ಥಾನದ ರಚನೆಯ ಬಗ್ಗೆ ನಡೆಸಿದ ಅಧ್ಯಯನದ ಕತೆ. ಅಲ್ಲಿರುವ ಮಂಟಪದ ಏಕಶಿಲಾ ವೇದಿಕೆ-ಒತ್ತಕ್ಕಲ್-ಸೇರಿ ದೇಗುಲ ನಿರ್ಮಾಣದಲ್ಲಿ ಬಳಕೆಯಾಗಿರುವ ಕಲ್ಲುಗಳನ್ನು ಯಾರು ಎಲ್ಲಿಂದ ಹೇಗೆ ತಂದಿಟ್ಟಿರಬಹುದೆಂದು ಹುಡುಕಿ ಹೊರಟ ಲೇಖಕರ ಅನುಭವಗಳನ್ನು ಈ ಕೃತಿ ದಾಖಲಿಸಿದೆ. ಇತಿಹಾಸ ಹಾಗೂ ಶಿಲ್ಪಕಲೆಗಳ ಜೊತೆಯಲ್ಲೇ ಕಲ್ಲುಗಳ ಹಿಂದಿನ ವಿಜ್ಞಾನವನ್ನೂ ನವಿರಾಗಿ ತಲುಪಿಸಿರುವುದು ಈ ಪುಸ್ತಕದ ಹೆಗ್ಗಳಿಕೆ. ವಿಜ್ಞಾನಿಯೊಬ್ಬರು ಯಾವುದೇ ವಿಷಯದ ಬೆನ್ನತ್ತಿದರೆ ಅವರ ಅಧ್ಯಯನ-ವಿಶ್ಲೇಷಣೆ ಹೇಗೆಲ್ಲ ಸಾಗುತ್ತದೆ ಎನ್ನು ವುದಕ್ಕೂ ಇದೊಂದು ಉತ್ತಮ ಉದಾಹರಣೆ.

ದೇಗುಲ ನಿರ್ಮಾಣದಲ್ಲಿ ಭಾಗಿಯಾಗಿದ್ದವರ ಬಗ್ಗೆ ಪ್ರಸ್ತಾಪಿಸುವಾಗ, ಸತ್ಯ ಒಂದುಕಡೆ ಇಂತಹ ವ್ಯಕ್ತಿಗಳನ್ನು ನಮ್ಮ ಪ್ರಸ್ತುತ ಕಾಲದಲ್ಲಿ ಹೇಗಾದರೂ ಭೇಟಿ ಮಾಡಿ ಅವರ ಬಗ್ಗೆ ತಿಳಿದು ಕೊಂಡರೆ ಎಷ್ಟು ಚೆನ್ನ ಅನ್ನುವ ಅಸಂಬದ್ಧ ಯೋಚನೆ ನನಗೆ ಆಗೊಮ್ಮೆ ಈಗೊಮ್ಮೆ ಬರುತ್ತದೆ ಎಂದು ಬರೆದಿದ್ದಾರೆ. ಕನ್ನಡದಲ್ಲಿ ಜನಪ್ರಿಯ ವಿಜ್ಞಾನದ ಅತ್ಯುತ್ತಮ ಕೃತಿಗಳ ಲ್ಲೊಂದಾದ ಹಸುರು ಹೊನ್ನು ಓದುವಾಗ ನನಗೂ ಅಂತಹ ಯೋಚನೆ ಬರುತ್ತದೆ - ಬಿ.ಜಿ.ಎಲ್. ಸ್ವಾಮಿಯವರನ್ನು ಒಮ್ಮೆ ಭೇಟಿಯಾಗುವಂತಿದ್ದರೆ ಹೇಗಿರುತ್ತಿತ್ತು ಅಂತ!

ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಸಂವಹನ ಕೈಗೊಂಡವರಲ್ಲಿ ವಿಜ್ಞಾನಿಗಳಿದ್ದಾರೆ, ಅಧ್ಯಾಪಕರೂ ಇದ್ದಾರೆ. ಅವೆರಡೂ ಆಗಿದ್ದ ಸ್ವಾಮಿಯವರ ಬರಹಗಳು ಸಾಹಿತ್ಯ, ಇತಿಹಾಸ, ಹಾಸ್ಯ ಮೊದಲಾದವುಗಳ ನಡುವೆ ವಿಜ್ಞಾನವನ್ನೂ ಅತ್ಯಂತ ಸೊಗಸಾಗಿ ತಿಳಿಹೇಳುತ್ತವೆ. ಹೊಸ ವಿಷಯಗಳನ್ನು ತಿಳಿದುಕೊಳ್ಳುವ ನಿಟ್ಟಿನಲ್ಲಿ ನಮ್ಮನ್ನು ಪ್ರೇರೇಪಿಸುತ್ತವೆ.

ಸಂಪೂರ್ಣ ಹೊಸದಾದ ವಿಷಯವನ್ನು ಕನ್ನಡದಲ್ಲಿ ಹೇಳುವುದು ಹೇಗೆ? ಹಾಗೊಂದು ಪ್ರಯತ್ನಕ್ಕೆ ಕೈಹಾಕುವವರಿಗೆ ನಳಿನಿ ಮೂರ್ತಿಯವರ ಬರಹಗಳು ಮಾರ್ಗದರ್ಶನ ಮಾಡಬಲ್ಲವು. ಕೆನಡಾದಲ್ಲಿ ಪ್ರಾಧ್ಯಾಪಕರಾಗಿದ್ದ ಅವರು ಕಂಪ್ಯೂಟರ್ ವಿಜ್ಞಾನದ ಪ್ರಾಥಮಿಕ ಅಂಶಗಳನ್ನು 1980ರಷ್ಟು ಹಿಂದೆಯೇ ಕನ್ನಡದ ಓದುಗರಿಗೆ ಪರಿಚಯಿಸಿದ್ದರು.

ಬರಹವಷ್ಟೇ ಅಲ್ಲ, ಬರಹದ ಹಿಂದಿನ ಪ್ರಯತ್ನಗಳೂ ಪ್ರೇರಣೆ ನೀಡುವುದು ಸಾಧ್ಯ. ವಿಜ್ಞಾನದ ಅಧ್ಯಾಪಕರಾಗಿದ್ದ ಬೆಳ್ಳಾವೆ ವೆಂಕಟನಾರಣಪ್ಪನವರು ತಮ್ಮ ಸಂಗಡಿಗರೊಂದಿಗೆ ಒಂದು ಶತಮಾನಕ್ಕೂ ಹಿಂದೆ ವಿಜ್ಞಾನ ಪತ್ರಿಕೆಯನ್ನೂ ಜನಪ್ರಿಯ ವಿಜ್ಞಾನದ ಪುಸ್ತಕಗಳನ್ನೂ ಹೊರತರಲು ಎಷ್ಟು ಕಷ್ಟಪಟ್ಟಿರಬಹುದು? ಅಂತರಜಾಲವೂ ಸರ್ಚ್ ಎಂಜಿನ್ನುಗಳೂ ಇಲ್ಲದ ಎಪ್ಪತ್ತರ ದಶಕದಲ್ಲಿ ನಿರಂಜನರು, ಅಡ್ಯನಡ್ಕ ಕೃಷ್ಣಭಟ್ಟರು ಜ್ಞಾನಗಂಗೋತ್ರಿಯಂತಹ ವಿಶ್ವ ಕೋಶವನ್ನು ಅತ್ಯಂತ ಕಡಿಮೆ ಸಮಯದಲ್ಲಿ ಅದು ಹೇಗೆ ರೂಪಿಸಿರಬಹುದು? ಪ್ರಾಯಶಃ ಇಂತಹ ಸಾಹಸಗಳ ಕತೆಯೇ ಒಂದು ಪುಸ್ತಕವಾಗಬಹುದೋ ಏನೋ.

ವಿಜ್ಞಾನಿಗಳಲ್ಲದವರು, ವಿಜ್ಞಾನದ ಅಧ್ಯಾಪಕರಲ್ಲದವರು ಜನಪ್ರಿಯ ವಿಜ್ಞಾನ ಸಂವಹನ ಮಾಡಿಲ್ಲವೇ? ಖಂಡಿತಾ ಮಾಡಿದ್ದಾರೆ. ಪಂಜೆ ಮಂಗೇಶರಾಯರು, ಶಿವರಾಮ ಕಾರಂತ, ಪಾ. ವೆಂ.ಆಚಾರ್ಯ ಸೇರಿ ಹಲವು ಮಹನೀಯರ ಬರಹಗಳು ಇದಕ್ಕೆ ಉತ್ತಮ ಉದಾಹರಣೆಗಳು. ಪೂರ್ಣಚಂದ್ರ ತೇಜಸ್ವಿಯವರೂ ತಮ್ಮ ಬರಹಗಳಲ್ಲಿ ವಿಜ್ಞಾನದ ವಿಷಯಗಳಿಗೆ ಸ್ಥಾನಕೊಟ್ಟಿ ದ್ದರು. ವಿಜ್ಞಾನದ ಹಿನ್ನೆಲೆಯಿಲ್ಲದಿದ್ದರೂ ಜನಪ್ರಿಯ ವಿಜ್ಞಾನವನ್ನು ಜನರಿಗೆ ತಲುಪಿಸಬಹುದೇ? ಆ ಪ್ರಶ್ನೆಗೆ ಇವರೆಲ್ಲರ ಬರಹಗಳೇ ಉತ್ತರ!

**-ಟಿ.ಜಿ. ಶ್ರೀನಿಧಿ**

# ಬಿಳಿ ಕೆಂಬರಲು ಹಕ್ಕಿ

**ನಾ**ನೊಮ್ಮೆ ಗೆಳೆಯ ರಂಗನಾಥರ ಜೊತೆ ತುಂಗಭದ್ರಾ ಹಿನ್ನೀರಿನ ಪ್ರದೇಶಕ್ಕೆ ಪಕ್ಷಿ ವೀಕ್ಷಣೆಗೆಂದು ಹೋಗಿದ್ದೆ. ಜನವರಿ ತಿಂಗಳು ಅದ್ದರಿಂದ ನೀರು ಸ್ವಲ್ಪ ಕಡಿಮೆಯಾಗಿದೆ ಅಂತ ಹೇಳಿದರು. ಹಾಗಾಗಿ ನಾವು ಬಹಳ ದೂರದವ ರೆಗೆ ಬೈಕಿನಲ್ಲಿ ಹೋಗ ಬೇಕಾ ಯಿತು. ಮಳೆಗಾಲದಲ್ಲಿ ನೀರುನಿಲ್ಲುವ ಗದ್ದೆ ಗಳಲ್ಲಿ ನೀರು ಇಳಿದುದ್ದರಿಂದ ಭತ್ತ, ಕಬ್ಬುಗಳನ್ನು ರೈತರು ನಾಟಿಮಾಡಿದ್ದರು. ಗದ್ದೆಗಳನ್ನು ದಾಟಿ ಹಿನ್ನೀರಿನ ಸಮೀಪ ತಲುಪಿದಾಗ ಅಲ್ಲೊಂದು ಹಕ್ಕಿಗಳ ಹಿಂಡು ತಮ್ಮ ಪಿಕಾಸಿ ಯಂತಹ ಕೊಕ್ಕಿನಿಂದ ನೀರನ್ನು ಅಗೆಯುತ್ತಾ, ನೀರು, ಕೆಸರು ಮಿಶ್ರಿತ ಜೌಗು ಪ್ರದೇಶದಲ್ಲಿ ತಮ್ಮ ಉದ್ದನೆಯ ಕಾಲುಗಳ ಸಹಾಯದಿಂದ ಓಡಾಡುತ್ತಾ ಏನನ್ನೋ ಹೆಕ್ಕಿ ತಿನ್ನುತ್ತಿದ್ದವು.



ಊರಿನ ಕೋಳಿಗಿಂತ ಗಾತ್ರದಲ್ಲಿ ದೊಡ್ಡ ದಾದ ಹಕ್ಕಿ. ಪಕ್ಕನೆ ನೋಡಲು ಕೊಕ್ಕರೆಯಂತೆ ಕಾಣುತ್ತದೆ ಆದರೆ ಕೊಕ್ಕರೆ ಅಲ್ಲ. ನೀಳವಾದ ಉದ್ದನೆಯ ಕಾಲುಗಳು ನೀರು ಮತ್ತು ಕೆಸರಿ ನಲ್ಲಿ ಓಡಾಡಲು ಅನುಕೂಲವಾಗಿವೆ. ಕೊಕ್ಕಿ ನಿಂದ ಕುತ್ತಿಗೆಯವರೆಗೂ ಪೂರ್ತಿ ಕಪ್ಪು ಬಣ್ಣ. ತಕ್ಷಣ ನೋಡಿದಾಗ ಬೋಳುತಲೆಯಂತೆ ಭಾಸವಾಗುತ್ತದೆ. ಕಪ್ಪು ಬಣ್ಣದ ಉದ್ದನೆಯ ಕೊಕ್ಕುಗಳು ಮಣ್ಣನ್ನು ಅಗೆ ಯುವ ಪಿಕಾಸಿ ಯಂತೆ ಮುಂದಕ್ಕೆ ಬಾಗಿವೆ. ಕಾಲು, ಕತ್ತು, ಮುಖ, ಕೊಕ್ಕು ಎಲ್ಲವೂ ಕಪ್ಪು ಬಣ್ಣವಾದರೆ ದೇಹ, ರೆಕ್ಕೆ, ಹೊಟ್ಟೆಯ ಭಾಗಗಳೆಲ್ಲ ಅಚ್ಚ ಬಿಳೀ ಬಣ್ಣ.

ವಿಶಾಲವಾದ ಕೆರೆಗಳು, ನದಿಯ ಬದಿಯ ನೀರಿನ ಪ್ರದೇಶ, ಬೇಸಾಯ ಮಾಡದೇ ನೀರು ನಿಂತ ಗದ್ದೆಗಳಲ್ಲಿ ಈ ಹಕ್ಕಿಯನ್ನು ನೋಡ ಬಹುದು. ಹಾರುವಾಗ ಹಲವು ಹಕ್ಕಿಗಳು ಜೊತೆಯಾಗಿ ಹಾರುತ್ತವೆ. ಬಾಣದ ತುದಿ ಯಂತೆ ಅಥವಾ ಸಾಲಾಗಿ ಶಿಸ್ತಿನ ಸಿಪಾಯಿಗ ಳಂತೆ ಇವುಗಳು ಹಾರುವುದನ್ನು ನೋಡು ವುದೇ ಚಂದ. ಇವುಗಳು ಹಾರು ವುದನ್ನು ನೋಡಿಯೇ ಕವಿ ಕುವೆಂಪು ದೇವರು ರುಜು ಮಾಡಿದನು, ಪರವಶನಾಗುತ ಕವಿ ಅದ ನೋಡಿದನು ಎಂಬ ಸಾಲುಗಳನ್ನು ಬರೆದಿರಬೇಕು.

ನವೆಂಬರ್ ನಿಂದ ಫೆಬ್ರವರಿ ನಡುವೆ ಸಂತಾನೋತ್ಪತ್ತಿ ಮಾಡುವ ಈ ಹಕ್ಕಿಗಳು ನೀರಿನ ಆಶ್ರಯದ ಆಸುಪಾಸಿನ ಮರಗಳಲ್ಲಿ ಕಡ್ಡಿಗಳನ್ನು ಜೋಡಿಸಿ ಅಟ್ಟಳಿಗೆಯಂತಹ ಗೂಡನ್ನು ಮಾಡಿ, ಮೊಟ್ಟೆ ಇಟ್ಟು, ಮರಿ ಮಾಡುತ್ತವೆ. ಗಂಡು ಮತ್ತು ಹೆಣ್ಣು ಎರಡೂ ಹಕ್ಕಿಗಳು ಸಮಾನ ವಾಗಿ ಮರಿಗಳ ಲಾಲನೆ ಪಾಲನೆ ಮಾಡುತ್ತವೆ. ಭಾರತ, ಪಾಕಿಸ್ತಾನ, ಶ್ರೀಲಂಕಾ ದೇಶಗಳಲ್ಲಿಯೂ ಈ ಹಕ್ಕಿ ಕಾಣಸಿಗುತ್ತದೆಯಂತೆ. ಈ ಹಕ್ಕಿ ಹಾರುವಾಗ ಇವುಗಳ ರೆಕ್ಕೆಯ ಅಡಿಭಾಗದಲ್ಲಿ ಕೆಂಪುಬಣ್ಣ ಕಾಣುತ್ತದೆ. ಅದೇ ಕಾರಣಕ್ಕಾಗಿ ಇವುಗಳಿಗೆ ಕೆಂಬರಲು ಎಂಬ ಕನ್ನಡದ ಹೆಸರು ಬಂದಿರ ಬೇಕು. ಇವುಗಳ ಇನ್ನೂ ಎರಡು ಸೋದರ ಸಂಬಂಧಿಗಳು ನಮ್ಮ ದೇಶದಲ್ಲೂ ಕಾಣ ಸಿಗುತ್ತವೆ. ನೀರಿನ ಪ್ರದೇಶದಲ್ಲಿ ಕಪ್ಪೆ, ಗೊದ ಮೊಟ್ಟೆ, ಮೀನು, ಏಡಿ, ಏಡಿಯ ಮೊಟ್ಟೆಗಳನ್ನು ತಿಂದು ಬದುಕುವ ಈ ಹಕ್ಕಿ ನಿಮ್ಮ ಆಸುಪಾಸಿನ ಕೆರೆ, ನದಿಗಳ ಸಮೀಪವೂ ಕಾಣಸಿಗಬಹುದು. ನೋಡ್ತೀರಲ್ಲ.

**-ಅರವಿಂದ ಕುಡ್ಲ, ಬಂಟ್ವಾಳ**

# ರಾಜಾ ಉಶೀನರ

**ಹೆ**ಚ್ಚು ಪ್ರಚಾರ ಪಡೆಯದ ಒಬ್ಬ ದಾನಿ ಉಶೀನರ. ಈ ಕಥೆ ಮಹಾಭಾರತದ ವನಪರ್ವದಲ್ಲಿ ಬಂದಿದೆ. ಉಶೀನರ ಭೋಜನಗರದಲ್ಲಿ ಒಂದು ಕಾಲದಲ್ಲಿ ಮಹಾಪ್ರತಾಪಶಾಲಿಯಾದ ರಾಜನಾಗಿದ್ದ. ಆತ ತುಂಬ ಉದಾರಿಯೆಂತಲೂ, ಪರೋಪಕಾರಿ ಹಾಗೂ ಮಹಾದಾನಿ ಎಂತಲೂ ಪ್ರಸಿದ್ಧನಾಗಿದ್ದ. ಇವನ ದಾನಶೀಲತೆಯ ಕೀರ್ತಿ ಮೂರು ಲೋಕಗಳಲ್ಲೂ ಹರಡಿತ್ತು. ಈ ವಿಷಯ ದೇವತೆಗಳ ನಾಯಕನಾದ ದೇವೇಂದ್ರನನ್ನು ಮುಟ್ಟಿತು. ಬಹುಶ: ಮಾನವರ ಸಾಧನೆಗಳು ದೇವತೆಗಳಲ್ಲೂ ಅಸೂಯೆಯನ್ನು ಉಂಟುಮಾಡುತ್ತಿದ್ದವೆಂದು ತೋರುತ್ತದೆ.

ಇಂದ್ರನಿಗೆ ಉಶೀನರನ ದಾನ ಮಾಡುವ ಮನಸ್ಸು ಯಾವ ಮಟ್ಟದವರೆಗೂ ಹೋಗ ಬಲ್ಲುದು ಎಂಬುದನ್ನು ಪರೀಕ್ಷಿಸುವ ಮನಸ್ಸಾಯಿತು. ಈ ಪರೀಕ್ಷೆ ನಡೆಸುವುದಕ್ಕಾಗಿ ಆತ ಇತರ ದೇವತೆಗಳ ಸಹಾಯ ಕೇಳಿದ. ಅಗ್ನಿಯನ್ನು ಕರೆದು ಒಂದು ಪಾರಿವಾಳದ ರೂಪವನ್ನು ಪಡೆ ಯಲು ಹೇಳಿದ. ತಕ್ಷಣ ಪಾರಿವಾಳದ ರೂಪದಲ್ಲಿ ಅಗ್ನಿ ನಿಂತ. ಇಂದ್ರ ಸ್ವತ: ತಾನೇ ನಾಯಿಯ ರೂಪ ತಾಳಿ ಪಾರಿವಾಳ ವನ್ನು ಹಿಡಿಯಲು ಬೆನ್ನು ಹತ್ತಿದ. ಗಾಬರಿಯಾದ ಪಾರಿವಾಳ ಹಾರುತ್ತ ಹಾರುತ್ತ ಉಶೀನರನ ಬಳಿಗೆ ಬಂದಿತು. ರಾಜ ತುಂಬ ದಯಾಳುವಲ್ಲವೇ? ಅದಕ್ಕೆ ಶರಣಾಗತಿಯನ್ನು ನೀಡಿದ. ಅದರ ಹಿಂದೆಯೇ ನಾಯಿಯೂ ಓಡಿ ಬಂತು. ತನಗೆ ಆಹಾರ ವಾಗಬೇಕಿದ್ದ ಪಾರಿವಾಳದ ಕಡೆಗೆ ನುಗ್ಗಲು ನೋಡಿತು. ಅದನ್ನು ಉಶೀನರ ತಡೆದು ನಿಲ್ಲಿಸಿದ. ಆಗ ನಾಯಿ ಹೇಳಿತು, ರಾಜಾ, ನೀನು ಮಾಡುವುದು ಅನ್ಯಾಯ. ಅದು ನನ್ನ ಆಹಾರ. ಅಲ್ಲಿಂದ ಇಲ್ಲಿಯ ವರೆಗೂ ಅದನ್ನು ಅಟ್ಟಿಸಿಕೊಂಡು ಬಂದಿದ್ದೇನೆ. ನನಗೆ ಬೆಳಿಗ್ಗಿನಿಂದ ಯಾವ ಆಹಾರವೂ ದೊರೆ ತಿಲ್ಲ. ಈ ಪಾರಿವಾಳವೇ ನನ್ನ ಇಡೀ ಮನೆಮಂದಿಗೆಲ್ಲ ಆಹಾರ. ಇದು ಸಿಗದಿದ್ದರೆ ನನ್ನ ಹೆಂಡತಿ, ಮಕ್ಕಳು ಮತ್ತು ನಾನು ಉಪವಾಸದಿಂದ ಸಾಯಬೇಕಾಗುತ್ತದೆ. ಆದ್ದರಿಂದ ಪಾರಿವಾಳವನ್ನು ನನಗೆ ಕೊಟ್ಟು ಬಿಡು.

ರಾಜ ಈಗಾಗಲೇ ಪಾರಿವಾಳಕ್ಕೆ ರಕ್ಷಣೆಯ ಅಭಯವನ್ನು ನೀಡಿದ್ದಾಗಿದೆ. ಅದನ್ನು ನಾಯಿಗೆ ಒಪ್ಪಿಸುವುದು ಸಾಧ್ಯವಿಲ್ಲ. ಆದರೆ ನಾಯಿಯ ವಾದವೂ ಸರಿಯಾದದ್ದೇ. ಅದಕ್ಕೆ ತನ್ನ ಆಹಾರ ವನ್ನು ಪಡೆದುಕೊಳ್ಳುವ ಅಧಿಕಾರವಿದೆ. ಪಾರಿವಾಳವನ್ನು ಅದಕ್ಕೆ ಕೊಡದಿದ್ದರೆ ನಾಯಿಗೆ ಅಪಚಾರ ಮಾಡಿ ದಂತಾಗುತ್ತದೆ. ಹೀಗೆ ಯೋಚಿಸಿ ಉಶೀನರ ನಾಯಿಗೆ ಹೇಳಿದ, ಪಾರಿವಾಳಕ್ಕೆ ನಾನು ರಕ್ಷಣೆ ನೀಡಿದ್ದರಿಂದ ಅದನ್ನು ನಿನಗೆ ಕೊಡಲಾರೆ. ಆದರೆ ನೀನೂ ಉಪವಾಸ ಬೀಳ ಬಾರದು. ಅದಕ್ಕೆ ಪಾರಿವಾಳದ ತೂಕದ ಮಾಂಸವನ್ನು ನನ್ನ ದೇಹದಿಂದ ಕೊಡುತ್ತೇನೆ. ತಕ್ಕಡಿ ಯನ್ನು ತರಿಸಿ ಅದರ ಒಂದು ತಟ್ಟೆಯಲ್ಲಿ ಪಾರಿವಾಳವನ್ನಿಟ್ಟು ಮತ್ತೊಂದರಲ್ಲಿ ತನ್ನ ದೇಹದ ಭಾಗಗಳನ್ನು ಕತ್ತರಿಸಿ ಹಾಕುತ್ತ ಬಂದ. ಅದೆಷ್ಟು ಮಾಂಸವನ್ನು ಹಾಕಿದರೂ ಪಾರಿವಾಳದ ತಟ್ಟೆ ಮೇಲಕ್ಕೇರುತ್ತಲೇ ಇಲ್ಲ! ಕೊನೆಗೆ ತಾನೇ ತಟ್ಟೆಯಲ್ಲಿ ಕುಳಿತು ತನ್ನ ಇಡೀ ದೇಹವನ್ನೇ ಸಮರ್ಪಿಸಿಕೊಂಡ. ಈ ಸರ್ವಾರ್ಪಣ ಭಾವವನ್ನು ಕಂಡು ಇಂದ್ರ, ಅಗ್ನಿ ತೃಪ್ತರಾಗಿ, ಪ್ರತ್ಯಕ್ಷವಾಗಿ ಅವನು ಮತ್ತೆ ಮೊದಲಿ ನಂತಾಗುವಂತೆ ವರ ನೀಡಿದರು. ಅವನ ಖ್ಯಾತಿ ಮತ್ತಷ್ಟು ಹೆಚ್ಚಿತು. ಘನವಾದ ತತ್ವವೊಂದಕ್ಕೆ ದಿನರಾತ್ರಿ ಮನಸೋತು, ಬೇರೆ ಏನನ್ನೂ ಚಿಂತಿಸದೇ ಸದಾ ಅದೇ ತತ್ವಕ್ಕೇ ತನ್ನನ್ನು ತೆತ್ತುಕೊಂಡು ಜೀವಭಾರವನ್ನು ಮರೆತ ಇಂಥ ಮಹಾನುಭಾವರ ಜೀವನ ಅಸಾಮಾನ್ಯವಾದದ್ದು.





## ಖುಲಾಸೆ ಅಂದ್ರೆ ಏನರ್ಥ?

**ಬೆ**ಳಿಗ್ಗೆ ಪತ್ರಿಕೆ ಓದುವಾಗ, ಮಂತ್ರಿ ಖುಷಿಯಿಂದ ಬೀಗುತ್ತಿದ್ದ. ತನ್ನ ಹತ್ತಿರದ ಸಂಬಂಧಿಕರಿಗೆ ಲಾಭ ಮಾಡಿಕೊಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಕೋರ್ಟ್ ತೀರ್ಪು ನೀಡಿತ್ತು. ಅದರಂತೆ, ಮಂತ್ರಿಯನ್ನು ಸ್ವಜನಪಕ್ಷಪಾತ ಆಪಾದನೆಯಿಂದ ಖುಲಾಸೆಗೊಳಿಸಲಾಗಿತ್ತು. ಮುಖಪುಟದಲ್ಲಿ ಪ್ರಕಟವಾದ ಈ ಸುದ್ದಿ ನೋಡಿ ಮಂತ್ರಿಗೆ ಅತೀವ ಆನಂದವಾಗಿತ್ತು. ಸದಾ ಗಂಭೀರವದನನಾಗಿ ಪತ್ರಿಕೆ ಓದುವ ಅಪ್ಪ, ಇಂದು ನಗುತ್ತಾ ಖುಷಿಯಲ್ಲಿರುವುದನ್ನು ಕಂಡು ಮಗ ಸೂರಿಗೆ ತುಸು ಆಶ್ಚರ್ಯವಾಯಿತು.

ಅಪ್ಪ, ನೀನು ಖುಷಿಪಡುವಂಥಹ ವಿಷಯ ಪತ್ರಿಕೆಯಲ್ಲಿ ಪ್ರಕಟವಾಗಿದೆಯಾ? ಅದು ಯಾವ ಸುದ್ದಿ? ಎಂದು ಸೂರಿ ಕೇಳಿದ. ನಾನು ಎಲ್ಲಾ ಆರೋಪಗಳಿಂದ ಖುಲಾಸೆ ಆಗಿದ್ದೇನೆ - ಗೊತ್ತಾ? ಇದಕ್ಕಿಂತ ಖುಷಿ ಮತ್ತೇನಿದೆ? ಎಂದು ಮಂತ್ರಿ ಮಗನಿಗೆ ಹೇಳಿದ. ಸೂರಿಗೆ ಖುಲಾಸೆ ಪದದ ಅರ್ಥ ಗೊತ್ತಾಗಲಿಲ್ಲ, ಅಪ್ಪ ಖುಲಾಸೆ ಅಂದ್ರೆ ಏನು? ಅಂತ ಕೇಳಿದ. ಅಷ್ಟೂ ಗೊತ್ತಾಗು ವುದಿಲ್ಲವಾ? ಖುಲಾಸೆ ಅಂದ್ರೆ, ನಾನು ಏನೂ ಮಾಡಿಲ್ಲ ಅಂತ ಅರ್ಥ ಎಂದ ಮಂತ್ರಿ, ಅದಕ್ಕೆ ಸೂರಿ ಹೇಳಿದ. ಈ ಮಾತನ್ನು ನಮ್ಮ ಕಾಲೇಜಿನಲ್ಲೂ ಎಲ್ಲರೂ ಹೇಳ್ತಾರೆ. ನಿನ್ನಪ್ಪ ಏನೂ ಮಾಡಲ್ಲ ಅಂತ.

## ನಿಧನದ ಸುದ್ದಿ

ಸೂರಿಯ ಹೆಂಡತಿ ಬೆಳಿಗ್ಗೆ ಕಾಫಿ ಹೀರುತ್ತಾ ಪತ್ರಿಕೆ ಓದುತ್ತಿದ್ದಳು. ಒಳಪುಟ ತಿರುವಿದಾಗ ಅವಳ ಫೋಟೊ ಕಣ್ಣಿಗೆ ಬಿತ್ತು. ಕುತೂಹಲದಿಂದ ಕೆಳಗಿನ ಸುದ್ದಿ ಕಡೆ ಕಣ್ಣಾಡಿಸಿದರೆ ಅವಳ ನಿಧನದ ಸುದ್ದಿ!

ತಕ್ಷಣ ಸೂರಿಗೆ ಫೋನ್ ಮಾಡಿ, ವಿಷಯ ಗೊತ್ತಾ? ಇಂದಿನ ಪೇಪರ್ ಓದಿದಿಯಾ? ನಾನು ಸತ್ತು ಹೋಗಿದ್ದೀನಂತೆ! ಎಂದಳು. ಅದಕ್ಕೆ ಸೂರಿ ಹೇಳಿದ- ಹೌದಾ? ಅದ್ಸರಿ ನೀನು ಎಲ್ಲಿಂದ ಫೋನ್ ಮಾಡ್ತಾ ಇದೀಯಾ ಮೊದಲು ಹೇಳು. ಆನಂತರ ನೀನು ಸತ್ತಿದ್ದೀಯಾ ಇಲ್ಲವಾ ಅಂತ ಹೇಳೇನೆ !

## ಯಾರು ಬುದ್ಧಿವಂತರು?

ತುಂಬಾ ಹಿಂದಿನ ರೀಡರ್ಸ್ ಡೈಜೆಸ್ಟ್ ಮಾಸಿಕದಲ್ಲಿ ಓದಿದ ಒಂದು ಪ್ರಸಂಗವಿದು. ಮುಸೋಲಿನಿ ಅಧಿಕಾರಕ್ಕೆ ಬಂದ ಕೆಲ ದಿನಗಳಲ್ಲಿ ಅಮೇರಿಕಾದ ಶ್ರೀಮಂತ ಆರ್ಟ್ ಸಂಗ್ರಹ ಕಾರ ಇಟಲಿಗೆ ಬಂದು, ಹದಿನಾರನೇ ಶತಮಾನದ ಪ್ರಸಿದ್ಧ ಕಲಾವಿದ ಟಿಟಿಯನ್‌ನ ಬೃಹತ್ ವರ್ಣಚಿತ್ರವನ್ನು ಭಾರಿ ಬೆಲೆಗೆ ಖರೀದಿಸಿದ. ಅದನ್ನು ಅಮೇರಿಕಾಕ್ಕೆ ತೆಗೆದುಕೊಂಡು ಹೋಗು ವುದು ಅವನ ಉದ್ದೇಶವಾಗಿತ್ತು. ಆದರೆ ಅದನ್ನು ಇಟಲಿಯಿಂದ ಹೊರಗೆ ತೆಗೆದು ಕೊಂಡು ಹೋಗಲು ಮುಸೋಲಿನಿ ಸರ್ಕಾರ ಅನುಮತಿ ನೀಡಲಿಕ್ಕಿಲ್ಲ ಎಂದು ಅವನಿಗೆ ಕೆಲವರು ಹೇಳಿ ದರು. ಆಗ ಆ ಅಮೆರಿಕನ್ ಕಲಾಸಂಗ್ರಹಕಾರನಿಗೆ ಅತೀವ ಬೇಸರವಾಯಿತು. ಇದನ್ನು ತನ್ನ ದೇಶಕ್ಕೆ ತೆಗೆದುಕೊಂಡು ಹೋಗುವುದು ಹೇಗೆ ಎಂದು ಆತ ಒಬ್ಬ ಸಲಹೆಗಾರನನ್ನು ಕೇಳಿದ.

ಅದಕ್ಕೆ ಆತ ಒಂದು ಸಲಹೆ ನೀಡಿದ-ಒಂದು ಕೆಲಸ ಮಾಡಿ, ಟಿಟಿಯನ್‌ನ ವರ್ಣಚಿತ್ರದ ಮೇಲೆ ಮುಸೋಲಿನಿ ವರ್ಣಚಿತ್ರವನ್ನು ಬಿಡಿಸುವಂತೆ ಸ್ಥಳೀಯ ಕಲಾವಿದನಿಗೆ ಹೇಳಿ. ಆತ ಅದನ್ನು ಬಿಡಿಸಿಕೊಡುತ್ತಾನೆ. ಮುಸೋಲಿನಿ ಆಡಳಿತದ ಅಧಿಕಾರಿಗಳು ತಮ್ಮ ನಾಯಕನ ಚಿತ್ರ ವನ್ನು ಅಮೇರಿಕಾಕ್ಕೆ ತೆಗೆದು ಕೊಂಡು ಹೋಗುವವನು ಮುಸೋಲಿನಿ ಅಭಿಮಾನಿಯಿರ ಬೇಕೆಂದು, ತಕ್ಷಣ ಸಂತೋಷದಿಂದ ಅನುಮತಿ ನೀಡುತ್ತಾರೆ. ಅಮೇರಿಕಾಕ್ಕೆ ಹೋದ ನಂತರ, ಮೇಲಿನ ಪೇಂಟಿಂಗ್‌ನ್ನು ಕೆರೆಸಿ ತೆಗೆದುಹಾಕಿ.

ಅಮೇರಿಕಾದ ಕಲಾ ಸಂಗ್ರಹಕಾರನಿಗೆ ಇದು ಅದ್ಭುತ ಐಡಿಯಾ ಎಂದೆನಿಸಿತು. ಆತ ತಕ್ಷಣ ಸ್ಥಳೀಯ ಕಲಾಕಾರನನ್ನು ಕರೆಯಿಸಿ, ಟಿಟಿಯನ್ ಪೇಂಟಿಂಗ್ ಮೇಲೆ ಮುಸೋಲಿನಿ ಪೇಂಟಿಂಗ್ ಬಿಡಿಸಿಕೊಡುವಂತೆ ಹೇಳಿದ. ಆತ ಬಿಡಿಸಿಕೊಟ್ಟ, ಮುಂದೆ ಆತ ಅಂದುಕೊಂಡಂತೆ ಆಯಿತು. ಯಾವ ತೊಂದರೆಯೂ ಇಲ್ಲದೇ ಪೇಂಟಿಂಗ್ ಅನ್ನು ಸುಲಭವಾಗಿ ಅಮೇರಿಕಾಕ್ಕೆ ತೆಗೆದುಕೊಂಡು ಬಂದ. ಬಂದವನೇ ಆ ಪೇಂಟಿಂಗ್ ಮೇಲೆ ಬಿಡಿಸಿದ ಮುಸೋಲಿನಿ ಚಿತ್ರವನ್ನು ಕೆರೆಸಿ ಹಾಕುವಂತೆ ನುರಿತ ಪೇಂಟರ್‌ಗೆ ಹೇಳಿದ. ಆತ ಹರಿತವಾದ ಚಾಕುವಿನಿಂದ ಬಹಳ ನಾಜೂಕಿನಿಂದ-ಮೇಲಿನ ಪದರ ಕೆರೆಸಿ ಹಾಕಿದ. ಟಿಟಿಯನ್‌ನ ಅದ್ಭುತ ಪೇಂಟಿಂಗ್ ಎದ್ದು ಕಂಡಿತು. ಅಷ್ಟಕ್ಕೇ ಸುಮ್ಮನಾಗದ ಪೇಂಟರ್ ಸರ್ ಈ ಟಿಟಿಯನ್ ಪೇಂಟಿಂಗ್ ಕೆಳಗೆ ಬೇರೆ ಇನ್ನೊಂದು ಪೇಂಟಿಂಗ್ ಇರುವಂತಿದೆ ಎಂದು ಹೇಳಿದ. ಕಲಾ ಸಂಗ್ರಹಕಾರನಿಗೆ ದಿಗಿಲಾಯಿತು. ಆ ಪೇಂಟರ್, ಟಿಟಿಯನ್‌ನ ಪೇಂಟಿಂಗ್ ಅನ್ನು ಕೆರೆಸುತ್ತಿದ್ದಂತೆ ಮತ್ತೊಂದು ಚಿತ್ರ ಎದ್ದು ಬಂದಿತು. ನೋಡಿದರೆ ಮುಸೋಲಿನಿ ಪೇಂಟಿಂಗ್!

## ಇದ್ದದ್ದನ್ನು ಇದ್ದ ಹಾಗೆ ಹೇಳಿದರೆ..

ತಮಾಷೆ ಪ್ರಸಂಗ ಮೊಬೈಲ್ ಫೋನ್ ಇಲ್ಲದ ಕಾಲದಲ್ಲಿ ನಡೆದ ಪ್ರಸಂಗವಿದು. ಇದ್ದದ್ದನ್ನು ಇದ್ದ ಹಾಗೆ ಹೇಳಿದರೆ ಕೆಲವರು ತಪ್ಪಾಗಿ ಭಾವಿಸುತ್ತಾರೆ ಎಂಬುದನ್ನು ವಿವರಿಸಲು ಸ್ವಾಮೀಜಿ ಈ ಘಟನೆ ಹೇಳಿದ್ದರು. ಯುವ ವಿದ್ಯಾರ್ಥಿಯೊಬ್ಬ ಲೈಬ್ರರಿಯಿಂದ ಹೊರಡುವಾಗ ರಾತ್ರಿ ಹತ್ತು ಗಂಟೆಯಾಗಿತ್ತು. ಲೈಬ್ರರಿಯಿಂದ ನಿರ್ಗಮಿಸಿದವರಲ್ಲಿ ಅವನೇ ಕೊನೆಯವನಾಗಿದ್ದ. ಪಾರ್ಕಿಂಗ್ ತಾಣದಲ್ಲಿ ನಿಲ್ಲಿಸಿದ್ದ ಕಾರನ್ನು ಸ್ಟಾರ್ಟ್ ಮಾಡಬೇಕು ಎಂದು ಚಾವಿ ತಿರುವಿದರೆ, ಬ್ಯಾಟರಿ ಡೆಡ್ ಆಗಿತ್ತು. ಮೆಕಾನಿಕ್‌ಗೆ ಫೋನ್ ಮಾಡಿ ಕರೆಯೋಣ ಅಂದರೆ ಫೋನ್ ಬೂತ್ ದೂರದಲ್ಲಿತ್ತು. ಬೇರೆ ದಾರಿ ಕಾಣದೇ ಹತ್ತಿರದಲ್ಲಿರುವ ಲೇಡೀಸ್ ಹಾಸ್ಟೆಲ್‌ಗೆ ಹೋದ. ಬಾಗಿಲಲ್ಲಿ ಯುವತಿಯೊಬ್ಬಳು ಕುಳಿತಿದ್ದಳು. ತನ್ನ ಸಮಸ್ಯೆಯನ್ನು ಅವಳಿಗೆ ಹೇಳಿದ. ಅವಳು ಹಾಸ್ಟೆಲ್ ವರಾಂಡದಲ್ಲಿರುವ ಫೋನ್ ತೋರಿಸುತ್ತಾ, ಪರವಾಗಿಲ್ಲ, ಒಳಗೆ ಹೋಗಿ, ಫೋನ್ ಮಾಡಿ ಎಂದು ಹೇಳಿದಳು. ಆತ ಒಳ ಬಂದು ಮೆಕಾನಿಕ್‌ಗೆ ಫೋನ್ ಮಾಡಿದ. ಮೆಕಾನಿಕ್‌ಗೆ ಸರಿಯಾಗಿ ಕೇಳಿಸುತ್ತಿರಲಿಲ್ಲ. ಹೀಗಾಗಿ ಯುವಕ ಜೋರಾಗಿ ಕಿರುಚುತ್ತಿದ್ದ. ಆ ಹೊತ್ತಿನಲ್ಲಿ ಗಂಡಸಿನ ದನಿಯನ್ನು ಕೇಳಿದ ಮೊದಲ ಮಹಡಿಯಲ್ಲಿದ್ದ ಹಾಸ್ಟೆಲ್ ಸಂಘದ ಸೆಕ್ರೆಟರಿ ಗಾಬರಿ ಗೊಂಡಳು. ಬಾಗಿಲಲ್ಲಿ ಕುಳಿತಿದ್ದ ಯುವತಿಗೆ ಹೇಳಿದಳು- ಏನಮ್ಮಾ, ಯಾವನೋ ಗಂಡಸು ಹಾಸ್ಟೆಲ್ ಒಳಗೆ ಬಂದಂತಿದೆ. ರಾತ್ರಿ ಹತ್ತು ಗಂಟೆ ನಂತರ, ಹಾಸ್ಟೆಲ್ ಒಳಗೆ ಗಂಡಸರನ್ನು ಒಳ ಬಿಡಬಾರದು ಎಂಬುದು ಗೊತ್ತಿಲ್ಲವಾ?. ಅದಕ್ಕೆ ಬಾಗಿಲಲ್ಲಿ ನಿಂತವಳು ಜೋರಾಗಿ ಹೇಳಿದಳು- ಪರವಾಗಿಲ್ಲ ಬಿಡಮ್ಮ, ಅವನ ಬ್ಯಾಟರಿ ಡೆಡ್ ಆಗಿದೆಯಂತೆ.

## ರಾಜೀನಾಮೆ ಪತ್ರ


ಸೂರಿಯ ರಾಜೀನಾಮೆ ಪತ್ರ ಇಟ್ಟಿದ್ದ ಫೈಲ್ ಬಾಸ್ ಕೈಯಲ್ಲಿ ಆಫೀಸಿನಲ್ಲಿ ಎಲ್ಲೋ ಕಳೆದು ಹೋಗಿತ್ತು. ಅದಕ್ಕಾಗಿ ಬಾಸ್ ತಮ್ಮ ಸಿಬ್ಬಂದಿಯನ್ನು ಕರೆದು ಹೀಗೊಂದು ಸೂಚನೆಯಿತ್ತರು..

**ಬಾಸ್:** ನನ್ನ ಒಂದು ಫೈಲ್ ಕಳೆದು ಹೋಗಿದೆ. ಅದರೊಳಗೆ ಹತ್ತು ಸಾವಿರ ರೂಪಾಯಿ ಗಳಿದ್ದವು. ಹುಡುಕಿ ತಂದುಕೊಟ್ಟವರಿಗೆ ಎರಡು ಸಾವಿರ ರೂಪಾಯಿ ಬಹುಮಾನ ಹಾಗೂ ರಾತ್ರಿ ಪ್ರತಿಷ್ಠಿತ ಹೋಟೇಲ್ ಒಂದರಲ್ಲಿ ಊಟ ಕೊಡಿಸಲಾಗುವುದು.

ಅದನ್ನು ಕೇಳಿದ ಸೂರಿ ಕೀರಲು ಧ್ವನಿಯಲ್ಲಿ ಮೆಲ್ಲಗೆ ಹೇಳಿದ

ಸೂರಿ: ಅದನ್ನು ನನಗೆ ತಂದುಕೊಟ್ಟವರಿಗೆ ಐದು ಸಾವಿರ ರೂಪಾಯಿ ಬಹುಮಾನ ಹಾಗೂ ಫೈವ್ ಸ್ಟಾರ್ ಹೋಟೇಲ್‌ನಲ್ಲಿ ಒಂದು ವಾರ ಉಚಿತವಾಗಿ ಉಳಿಯಲು ಅವಕಾಶ ಕಲ್ಪಿಸಲಾಗುವುದು!

## ಕುಡಿತ



**ವ**ಯಸ್ಸೇನು ತುಂಬಾ ದೊಡ್ಡದಲ್ಲ. ಶಿಕ್ಷಣ ಪಡೆಯೋದಕ್ಕೆ ಸರಿಯಾದ ಕಾಲಘಟ್ಟ. ಅಲ್ಲಿ ಕಾರ್ತಿಕನಿಗೆ ಅಭಿವೃದ್ಧಿಯೊಂದಿಗೆ ಸಹವಾಸ ಬೆಳೆಯಿತು. ಬದುಕಿನ ದಾರಿ ಗಟ್ಟಿಯಾಯಿತು. ಸರಿಯಾದ ಮಾರ್ಗದಲ್ಲಿ ಹೋದ ಹಾಗೆ ಜೊತೆ ಸೇರಿದವರಿಗೆ ತಾವು ಎಲ್ಲರಿಗಿಂತ ವಿಭಿನ್ನವಾಗಿರ ಬೇಕು ಅಂತ ಆಸೆ ಹುಟ್ಟಿತು. ಕೈಯಲ್ಲೊಂದು ಸಿಗರೇಟು ಮಿನುಗುದಕ್ಕೆ ಆರಂಭವಾಯಿತು. ಕೆಲವೊಂದು ಮಧ್ಯಪಾನ ಕೇಂದ್ರಗಳು ಆಗಾಗ ಹೋಗಿ ಬರುವ ತಾಣಗಳಾದವು. ಸಂಭ್ರಮಕ್ಕೂ ಖುಷಿಗೂ ಮನಸ್ಸಿನಲ್ಲಿ ಏನೂ ಯೋಚನೆ ಇಲ್ಲವಾದರೂ ಕೂಡ ಮಧ್ಯಪಾನ ಅದೊಂದು ಹವ್ಯಾಸವಾಯಿತು. ಅಲ್ಲಿ ಬದುಕಿನ ಯೋಚನೆಗಳ ಬಗ್ಗೆ ಮಾತನಾಡುವುದಕ್ಕೆ ಒಳ್ಳೆಯ ಸ್ಥಳ ಅನ್ನುವ ಯೋಚನೆ ಮನಸಲ್ಲಿ ಮೂಡಿತು. ಎರಡಿದ್ದ ಬಳಗ ಮೂರು ನಾಲ್ಕು ಹತ್ತರವರೆಗೆ ಬೆಳೆದು ನಿಲ್ತಾ ಹೋಯಿತು. ದೇಹದೊಳಗೆ ಇಳಿದ ಮಧ್ಯ ಏನೆಲ್ಲ ಕರಾಮತ್ತು ಮಾಡಬಹುದು ಎಲ್ಲವನ್ನು ಪ್ರತಿದಿನವೂ ಮಾಡುವುದಕ್ಕೆ ಆರಂಭಿಸುತ್ತಿದೆ. ಆಸೆಗಳಿದೆ ಕನಸುಗಳಿದೆ ಜವಾಬ್ದಾರಿಗಳಿದೆ ಇವೆಲ್ಲವೂ ಕೂಡ ಹೊಟ್ಟೆಯೊಳಗಿನ ವೇಷ ಮರೆಸಿ ಬಂದ ಭೂತದ ಬಗ್ಗೆ ಅವನಿಗಿನ್ನು ಅರ್ಥವಾಗಿಲ್ಲ. ಮುಂದೊಂದು ದಿನ ಸಾಧಿಸುವುದಕ್ಕೆ ಹೆಜ್ಜೆ ಇಟ್ಟಾಗ ದೇಹದೊಳಗೆ ಸುಡುವಿಕೆ ಆರಂಭವಾಗುತ್ತದೆ. ಸ್ಮಶಾನ ಬೇಗ ಕರೆಯುತ್ತದೆ. ನಂಬಿಕೊಂಡವರು ತಲೆಯ ಮೇಲೆ ಕೈ ಹೊತ್ತು ಸುಮ್ಮನೆ ಆಕಾಶ ನೋಡುತ್ತಾರೆ. ಕಣ್ಣೀರು ಬದುಕಾಗುತ್ತದೆ ತಿಳಿದವರು ಹೇಳಿದರು ಕೂಡ ಕಿವಿಯೊಳಗೆ ಕೇಳಿಕೊಂಡು ಮತ್ತದೇ ಕೆಲಸವನ್ನ ಮುಂದುವರಿಸಿದ್ದಾನೆ... ಭಗವಂತನೇ ದಾರಿ ತೋರಿಸಬೇಕಷ್ಟೇ.

**-ಧೀರಜ್ ಬೆಳ್ಳಾರೆ**

# ಸಂಗಪ್ಪನ ಸಾಹಸಗಳು

**ಸೈ**ಕಲ್ ಸವಾರಿಯಂಥ ಸಣ್ಣ ವಿಷಯಕ್ಕೆ ಸಂಗಪ್ಪ ಇಷ್ಟೆಲ್ಲ ಅವಾಂತರ ಮಾಡಿಕೊಳ್ಳಬೇಕಿತ್ತೆ ಅಥವಾ ಇಂಥಾದ್ದೆಲ್ಲಾದರೂ ಉಂಟೆ ಎಂದೆಲ್ಲ ಓದುಗ ಮಹಾಶಯರಿಗೆ ಅನ್ನಿಸಿರಬೇಕು. ಇಂಥಾದ್ದೆಲ್ಲಾದರೂ ಉಂಟೆ ಎಂಬ ಸಂಶಯ ಹಳ್ಳಿಗಳ ಪಾಳೇಗಾರಿ ವ್ಯವಸ್ಥೆಯಲ್ಲಿ ಬದುಕಿ ನರಳಿ ಬಂದವರಿಗೆ ಅಥವಾ ಸಂವೇದನಾಶೀಲತೆಯಿಂದ ನೋಡಿ ಬಂದವರಿಗೆ ಬರುವುದು ಸಾಧ್ಯವಿಲ್ಲ. ಇನ್ನು ಇಷ್ಟೆಲ್ಲ ಅವಾಂತರ ಮಾಡಿಕೊಳ್ಳೋ ಸಂಗಪ್ಪನ ಸಾಹಸಕ್ಕೂ ಮೇಲಿನ ಮಾತಿ ನಲ್ಲೇ ಉತ್ತರವಿದೆ. ಆದರೂ ಸಂಗಪ್ಪ ಈ ರೀತಿಯ ಸಂಗಪ್ಪನಾದದ್ದು ಹೇಗೆ ಅನ್ನೋದಕ್ಕಾಗಿ ಒಂದು ಪ್ರಸಂಗವನ್ನು ಉದಾಹರಣೆಯಾಗಿ ಕೊಡಬಹುದು. ಇದು ಉದಾಹರಣೆ ಮಾತ್ರ, ಇಂಥಹ ಅನೇಕ ಪ್ರಸಂಗಗಳು ಅವನ ಬದುಕಿನಲ್ಲಿ ನಡೆದಿವೆ. ನಿಮ್ಮೂರಲ್ಲಿರುವ ಸಂಗಪ್ಪಂದಿರ ಬದುಕಿನಲ್ಲೂ ನಡೆದಿರಬಹುದು.



ನಾನಿಲ್ಲಿ ಹೇಳೋದು ಸಂಗಪ್ಪನ ಅಂತರಂಗದ ವಿಷಯ. ಕೆಲವರು ಹೇಳೋದುಂಟು ನಮ್ಮಂಥಹವರು ಬರೆಯೊ ಸಾಮಾಜಿಕ, ರಾಜಕೀಯ ಪ್ರಜ್ಞೆಯ ಸಾಹಿತ್ಯದಲ್ಲಿ ಮನುಷ್ಯನ ಅಂತರಂಗಾನೇ ನೋಡಿರೊಲ್ಲ ಅಂತ. ಸಾಹಿತ್ಯ ವ್ಯಕ್ತಿಯ ಅಂತರಂಗಕ್ಕೆ ಮಾತ್ರ ಸೀಮಿತವಾಗ ಬೇಕಿಲ್ಲ. ನನ್ನ ಉದ್ದೇಶವಂತು ಸಮಾಜದ ಅಂತರಂಗವನ್ನು ನೋಡೋದು. ಆದರೆ ಇದು ಇಷ್ಟಕ್ಕೇ ನಿಲ್ಲದೆ ಸಮಾಜದ ಅಂತರಂಗದ ಮೂಲಕ ವ್ಯಕ್ತಿಯ ಅಂತರಂಗವನ್ನೂ ಕಾಣುವ ಕ್ರಿಯೆ ಉತ್ತಮ ಸೃಜನಶೀಲ ಕ್ರಿಯೆಯಾಗಬಲ್ಲುದು. ಇಲ್ಲದೆ ಹೋದರೆ ಕೇವಲ ವೈಯುಕ್ತಿಕವಾಗುವ ಒಂದು ಅತಿರೇಕ ಮತ್ತು ಒಣ ಘೋಷಣೆ ಭಾಷಣಗಳಾಗುವ ಇನ್ನೊಂದು ಅತಿರೇಕವನ್ನು ಕಾಣ ಬೇಕಾಗುತ್ತದೆ. ಇಲ್ಲಿಯೇ ಇನ್ನೊಂದು ಮಾತು. ವ್ಯಕ್ತಿಯ ಬಾಹ್ಯ ಚಟುವಟಿಕೆಗಳನ್ನು ಮಾತ್ರ ಹೇಳಿ ಅಂತರಂಗವನ್ನು ಮರೆಯಲಾಗಿದೆ ಎಂಬಂಥಹ ಮಾತುಗಳೂ ಟೀಕೆಯಾಗಿ ಕೇಳಿ ಬರುತ್ತವೆ. ವ್ಯಕ್ತಿಯ ಬಾಹ್ಯ ಚಟುವಟಿಕೆಗಳ ಹಿಂದೆ ಆಂತರಿಕ ಒತ್ತಡ ಇಲ್ಲವೆಂದು ಯಾಕೆ ತಿಳಿದುಕೊಳ್ಳಬೇಕು. ಉದಾಹರಣೆಗೆ ನಮ್ಮ ಕಥಾನಾಯಕ ಸಂಗಪ್ಪನನ್ನೇ ತೆಗೆದುಕೊಳ್ಳಿ, ಆತನ ಚಟುವಟಿಕೆಗಳು ಬಾಹ್ಯ ಎನ್ನಿಸಿದರೆ ಏನನ್ನೋಣ? ಸಾಹಿತಿಯೊಬ್ಬ ವ್ಯಕ್ತಿಗಳ ಖಾಸಗಿ ಬದುಕನ್ನು ಮಾತ್ರ ಚಿತ್ರಿಸಬೇಕೆ? ಬಾಹ್ಯಾಂತರಂಗಗಳಿಗೆ ಸಂಬಂಧವಿಲ್ಲವೆ? ಒಂದು ಕೃತಿಗೆ ನಿರ್ದಿಷ್ಟ ಚೌಕಟ್ಟು ಇರುವಾಗ ಅದರೊಳಗಿನ ವಿವಿಧ ಸಾಧ್ಯತೆಗಳನ್ನು ನಿರೀಕ್ಷಿಸಬೇಕೇ ಹೊರತು ಎಲ್ಲವೂ ಒಂದೇ ಕೃತಿಯಲ್ಲಿರಬೇಕೆಂದರೆ ಹೇಗೆ? ಹೀಗೆ ಏನೇನೋ ಪ್ರಶ್ನೆಗಳು ನನ್ನನ್ನು ಕಾಡಿಸುತ್ತವೆ. ಅದೇನೇ ಇರಲಿ ಸಮಾಜದ ಅಂತರಂಗವನ್ನು ಶೋಧಿಸುವ, ಆ ಮೂಲಕ ಈ ಅಂತರಂಗದ ಭಾಗವಾದ ವ್ಯಕ್ತಿಯ ಅಂತರಂಗಕ್ಕೂ ಚಾಚಿಕೊಳ್ಳುವ ಕೃತಿ ಹೆಚ್ಚು ಮಹತ್ವದ್ದಾಗಬಲ್ಲದು. ಜೊತೆಗೆ ಸಮಾಜದ ಅಂತರಂಗ ಶೋಧನೆಯ ಹಂತದ ಕೃತಿಗಳಿಗೂ ಒಂದು ಮಹತ್ವವಿದೆ. ವಸ್ತುವಿನ ಇತಿಮಿತಿ, ವ್ಯಾಪ್ತಿಗಳೇನು ಎನ್ನುವುದು ಮೊದಲು ಮುಖ್ಯ. ಆಮೇಲೆ ಸಾಧ್ಯತೆ ಮತ್ತು ನಿರೀಕ್ಷೆಯ ನಿರ್ಧಾರ, ನಿಜ, ಓದುಗ ಮಹಾಶಯ ಚರ್ಚೆ ಸಂಗಪ್ಪನನ್ನು ಬಿಟ್ಟು ಸಾಹಿತ್ಯ ಮೀಮಾಂಸೆಗೆ ಹೋಯ್ತು. ಈಗ ಅದನ್ನು ನಿಲ್ಲಿಸಿ ನಮ್ಮ ಸಂಗಪ್ಪನ ಅಂತರಂಗದ ವಿಷಯಕ್ಕೆ ಬರೋಣ.

ವ್ಯಕ್ತಿಯೊಬ್ಬ ಸಾರ್ವಜನಿಕ ಮಹತ್ವದವನಾಗಿದ್ದರೆ ತೀರಾ ಅಂತರಂಗದ ಅಥವಾ ಖಾಸಗಿ ವಿಷಯಗಳೂ ಹೀಗೆ ಬಹಿರಂಗ ಚರ್ಚೆಯ ಸಂಗತಿಗಳಾಗುತ್ತವೆಯೆಂಬುದಕ್ಕೆ ಈತನ ಒಂದು ಘಟನೆ ಸಾಕ್ಷಿ.

ಸಂಗಪ್ಪನ ಅಪ್ಪ ಸಾಮಾನ್ಯನಲ್ಲ. ಸ್ವಾತಂತ್ರ್ಯ ಹೋರಾಟಗಾರ. ಆದರೆ ಸಂಗಪ್ಪನಿಗೆ ಮೀಸೆ ಬರೋ ವೇಳೆಗೆ ಆತ ಗಾಂಧೀನ ಅರೆದು ಕುಡಿದ ಲೀಡರ್ ಗಾಂಧೀವಾದಿಯಾಗಿದ್ದ. ಸ್ವಾತಂತ್ರ್ಯೋತ್ತರ ಭಾರತದ ಗಾಂಧೀ ಒಕ್ಕಲಿಗೆ ಸೇರಿದ್ದ. ಈತನ ಪ್ರಾರಂಭಿಕ ಚಟುವಟಿಕೆಗಳು ಮಗ ಸಂಗಪ್ಪನ ಮೇಲೆ ಪ್ರಭಾವ ಬೀರದೆ ಇರಲಿಲ್ಲ. ಸ್ವಾತಂತ್ರ್ಯಪೂರ್ವ ಗಾಂಧೀವಾದಿ ಅಪ್ಪನ ಹರಿಜನ ಪ್ರೇಮ ಅದು ಹೇಗೋ ಸ್ವಾತಂತ್ರ್ಯೋತ್ತರದಲ್ಲಿ ಮಗ ಸಂಗಪ್ಪನ ಮನಸ್ಸಿಗೆ ಹರಿದು ಒಬ್ಬ ಹರಿಜನ ಕನ್ಯೇನ ಪ್ರೇಮಿಸಿಯೇ ಬಿಟ್ಟ. ಯಾರಾ ಪುಣ್ಯಶಾಲಿ, ಸಂಗಪ್ಪನಂಥವನನ್ನು ಆಕರ್ಷಿಸುವ ಭಾಗ್ಯಶಾಲಿ ಅಂತ ಕುತೂಹಲವೆ? ಅವಳ ಹೆಸರು ಮಲ್ಲಿ. ಒಳ್ಳೆ ಮೈಕಟ್ಟಿನ ಮಲ್ಲಿ. ನಮ್ಮ ಸಂಗಪ್ಪನ ಪ್ರೇಮಕ್ಕೆ ಇನ್ನೇನು ಬೇಕು? ಹೊಲಕ್ಕೆ ಕೂಲಿಗೆ ಬಂದಾಗ ಕೇಳೇಬಿಟ್ಟ ಆಕೆ ಒಂದು ಕ್ಷಣ ನಡುಗಿದಳು, ಆಮೇಲೆ ನಾಚಿದಳು. ಕಾಲ ಬೆರಳಲ್ಲಿ ನೆಲ ಗೀಚಿದಳು. ಅದರಿಂದ ಸಂಗಪ್ಪನಿಗೆ ಆಕೆ ಪ್ರೇಮ ಪತ್ರ ಬರೆದಷ್ಟೇ ಖುಷಿಯಾಗಿ ಪ್ರೇಮೋತ್ಕಟತೆಯಿಂದ ಚಿನ್ನ ರನ್ನ ಎಂದೆಲ್ಲ ಪಾಠ ಒಪ್ಪಿಸಿದ. ದಿನದಿನಕ್ಕೆ ಹೊಲದ ಮರದ ಗುಂಪುಗಳ ನಡುವೆ ಒಡನಾಟ ಜಾಸ್ತಿಯಾಗಿ ತನ್ನ ಪ್ರೇಮಕ್ಕೊಂದು ಆದರ್ಶದ ಮೆರುಗು ಕೊಟ್ಟ. ಗಾಂಧೀವಾದಿ ಅಪ್ಪನ ಮಗನಾಗಿ ನಿನ್ನ ಮದುವೆಯಾಗ್ತನೆ, ಆದರ್ಶವಾದಿಯಾಗ್ತೇನೆ ಎಂದು ಸಾರಿದ. ಮಲ್ಲಿ ಮೌನವಾಗಿರಲಿಲ್ಲ. ಮದ್ವೆ ಆಗಾಕ್ ಬಿಡ್ತಿದ್ರೆ? ಎಂದು ಕಣ್ಣಬಾಣ ಬಿಟ್ಟಳು. ಸಂಗಪ್ಪ ಯಾಕ್ ಬಿಡಲ್ಲ? ನಾನು ಆ ಮನೆ ವಂಶೋದ್ಧಾರಕ ಎಂದು ಬೀಗಿದ. ಅದುಕ್ಕೇಂಬ್ತಾನೆ ಮದ್ವೆ ಆಗಾಕ್ ಬಿಡ್ತಿದ್ರೆ? ಎಂದಳು ಮಲ್ಲಿ. ಏನೇ ಆದ್ರೂ ನಾನ್ ಮಾತ್ರ ನಿನ್ ಬಿಡಲ್ಲ ಎಂದು ಆಶ್ವಾಸನೆ ಕೊಟ್ಟ. ಮದ್ವೆ ಆದ್ರೂ ಈ ಊರಾಗೆಂಗ್ ಇರಾದಪ್ಪ. ನನಗಂತೂ ಬಯಾಗ್ತೈತೆ ಎಂದಳು ಆಕೆ. ನಿಂಗ್ಯಾಕೆ ನಾನಿದ್ದೀನಿ ಸುಮ್ಕಿರು ಎಂದ ಈತ.

ತನ್ನ ಅಪ್ಪನ ಬಳಿ ಈ ವಿಷಯ ಪ್ರಸ್ತಾಪಿಸುವ ಧೈರ್ಯವನ್ನು ಸಂಪಾದಿಸಿ ಶೇಖರಿಸಿ ಸಜ್ಜಾ ಗುವ ಹೊತ್ತಿಗೆ ಅಪ್ಪನೇ ಮಗನನ್ನು ಕೇಳಿಬಿಟ್ಟ. ಈ ವೇಳೆಗೆ ಇದು ಒಳಗೊಳಗೇ ಸುದ್ದಿಯಾಗಿತ್ತು. ಇದು ಯಾರದೊ ಒಬ್ಬರ ವಿಷಯವಾಗದೆ ಊರ ದೊಡ್ಡವರ ವಿಷಯವಾಯ್ತು. ದೊಡ್ಡರ ಮಕ್ಳೇ ಹಿಂಗ್ ಮಾಡಿದ್ರೆ, ಊರು ಉಳ್ಯುತ್ತಾ ಅಂತ ಹರೇಶಾನುಭೋಗರ ನೇತೃತ್ವದಲ್ಲಿ ಊರಿನ ಮರಿನಾಯಕರ ಗುಂಪು ಬಂದು ದೊಡ್ಡ ನಾಯಕರನ್ನು ಕೇಳಿಯೇಬಿಟ್ಟಿತು. ಇದರಿಂದ, ಕೋಪ ತಾಪಗಳಿಗೆ ತುತ್ತಾದ ದೊಡ್ಡ ನಾಯಕರು ತಮ್ಮ ಮಗನನ್ನು ಜಗ್ಗಿಸಿ ಕೇಳಿದರು.

ಏನೋ ನಿಂದು ಹಲ್‌ಕಟ್ ಕೆಲ್ಸ ?

ನಾನೇನು ಹಲ್‌ಕಟ್ಟಿಲ್ಲ. ನೀನೇ ಕಟ್ಟಿಸ್ಕೊಂಡಿರಾದು ಎಂದು ಬಿಟ್ಟ ನಮ್ಮ ಕಥಾನಾಯಕ ಸಂಗಪ್ಪ.

ಮತ್ತಷ್ಟು ರೇಗಿದ ಅವರಪ್ಪ. ಹಲ್ ಉದುರಿಸ್ಬಿಡ್ತೀನಿ ಎಂದ.

ಉದುರಿಸಿದ್ರೆ ನೀನೇ ಕಟ್ಟುಸ್ತೀಯ ಎಂದ ಮಗರಾಯ.

ಅಪ್ಪನಿಗೆ ತಡೆಯಲಾಗದೆ ಆರ್ಭಟಿಸಿದ ಯಾವ ಬೋಳೀಮಗ ಹೇಳಿದ್ನೊ ಮಾದಿಗ್ರ ಹುಡುಗಿ ಲವ್ ಮಾಡು ಅಂತ?

ನೀನೆ

ಏನೊ ಅಂದಿದ್ದು?

ನೀನೇ ಅಂದೆ. ಆಗ ಹೇಳ್ತಾ ಇದ್ದಲ್ಲ ಹರಿಜನರು ಅಂದ್ರೆ ಪ್ರೀತಿ ಪ್ರೇಮ ಇರ್ಬೇಕು. ಗಾಂಧಿ ಮಹಾತ್ಮರ ಮಾತ್ನ ನಾವೆಲ್ಲ ಪರಿಪಾಲುಸ್ಬೇಕು ಅಂತ. ಅದ್ಕೇ ನಾನು ಹರಿಜನರನ್ನ ಪ್ರೇಮಿಸ್ದೆ.

ಅಪ್ಪ ಚಡಪಡಿಸಿದ. ಕೈ ಕೈ ಹಿಸುಕಿಕೊಂಡ. ಮನಸ್ಸಿನೊಳಗೆ ಗಾಂಧೀಗೆ ಹಿಡಿಶಾಪ ಹಾಕಿದ. ಆಮೇಲೆ ಹೇಳಿದ

ಅದು ಅವತ್ತಿಗೆ, ಅವಾಗಿನ್ನು ಸ್ವತಂತ್ರ ಬಂದಿಲ್ಲ.

ಇವತ್ತು ನಂಗ್ ಸ್ವತಂತ್ರ ಬಂದೈತೆ -ಮಗ ಉತ್ತರಿಸಿದ.

ಹಂಗಾದ್ರೆ ನನ್ ಆಸ್ತೀಲಿ ನಿಂಗೆ ಚಿಕ್ಕಾಸೂ ಸಿಕ್ಕಲ್ಲ.

ನಿನ್ ಆಸ್ತೀನೂ ಬ್ಯಾಡ ಯಾತ್ರುದೂ ಬೇಡ ಎಂದು ಹೇಳಬೇಕೆಂದು ಬಾಯಿಗೆ ಬಂತಾದರೂ ಚಿಕ್ಕಂದಿನಿಂದ ಸುಖ ಸುಪ್ಪತ್ತಿಗೆಯ ರುಚಿ ಕಂಡಿದ್ದವನಿಗೆ ಹಾಗೆನ್ನಲು ಸಾಧ್ಯವಾಗಲಿಲ್ಲ. ಅದರ ಬದಲು ಸಿಟ್ಟನಾಗ್ ನೀನಂದಿದ್ದೆಲ್ಲ ನಿಜ ಎಲ್ಲಾಗ್ತೈತೆ ಎಂದು ಗೊಣಗಿದ. ಹರೇದ್ ಮತ್ತಿನಾಗ್ ಮಾಡಿದ್ದೆಲ್ಲ ಸರಿ ಹೆಂಗಾಗ್ತೈತೆ?- ಎಂದು ಅಪ್ಪ ಪ್ರಶ್ನೆ ಹಾಕಿದ.

ಮತ್ತು ಇಲ್ಲ ಏನೂ ಇಲ್ಲ. ಎಲ್ಲಾ ಗೊತ್ತಾಗೇ ಲವ್ ಮಾಡಿದ್ದೀನಿ -ಮಗ ಉತ್ತರಿಸಿದ. ಬರಿ ಲವ್ ಮಾಡಿದ್ದೀಯೊ ಅಥವಾ ಬರೀ ಲವ್ ಹೆಂಗ್ ಮಾಡೋದು?

ಮಗ ಸಲೀಸಾಗಿ ಪ್ರಶ್ನೆ ಹಾಕಿದ. ಅಪ್ಪನಿಗೆ ಆಕಾಶ ಬಿದ್ದಂತಾಯ್ತು. ಕೂಡಲೆ ಮಾತು ನಿಲ್ಲಿಸಿದ.

ಊರ ಮರಿನಾಯಕರಿಗೆ ಕರೆಹೋಯ್ತು. ದೊಡ್ಡ ನಾಯಕರು ಮಾದಿಗರ ಮಲ್ಲಿ ಮತ್ತು ಅವಳಪ್ಪ ಹನುಮನನ್ನು ಊರು ಬಿಡಿಸುವ ಮಾತಾಡಿದರು. ಆದರೆ ಕೆಲವರು ನಿಮ್ಮ ಮಗ ಮನಸ್ ಮಾಡ್ದಿದ್ರೆ, ಅವ್‌ಳಿಗೆಂಗ್ ಧೈರ್ಯ ಬರ್ತೈತೆ ಇಂಥಾದುಕ್ಕೆಲ್ಲ? ಎಂದರು. ಇನ್ನು ಕೆಲವರು ಏನೊ ಸುಮ್ಕೆ ಜೊತಿಗಿತಿ ಮಾಡ್ಕಂಡವ್ರೆ ಅಂದ್ರೆ, ಆಟೇ ಅಲ್ಲ, ಮದ್ವೆ ಆಗ್ತಾರಂತೆ ಎಲ್ಲಾನ ಉಂಟಾ? ಮುಂದೆ ಊರ ಹರೇದ್ ಹುಡುಗ್ರೆಲ್ಲ ಹಿಂಗೇ ಆದ್ರೇನ್ ಗತಿ? ಎಂದರು.

ಒಟ್ಟಿನಲ್ಲಿ ಇಷ್ಟು ತೀರ್ಮಾನ ಆಯ್ತು ಹನುಮ ಮತ್ತು ಅವನ ಮಗಳಿಗೆ ಬೆದರಿಕೆ ಹಾಕೋದು. ಅಷ್ಟಕ್ಕೇ ನಿಲ್ಲದೆ ಅವಳಿಗೊಂದು ಗಂಡುನೋಡಿ ಮದ್ವೆ ಮಾಡೋದು. ಆ ಖರ್ಚನ್ನೆಲ್ಲ ದೊಡ್ಡನಾಯಕರೇ ವಹಿಸಿಕೊಳ್ಳೋದು. ದೂರದೂರಲ್ಲಿ ಎಲ್ಲಾದ್ರೂ ಗುಟ್ಟಾಗಿ ಮದುವೆ ಮುಗಿಸಿ ಆಮೇಲೆ ಹೇಳಿದ್ರೆ ಸಂಗಪ್ಪ ಇನ್ನೇನು ಮಾಡಬಲ್ಲ? ಇದಾದ ಮೇಲೆ ಸಂಗಪ್ಪನನ್ನೂ ಸರಿಯಾಗಿ ನಡಕೊಳ್ಳೋ ಹಾಗೆ ಹೇಳಬೇಕು ಅಂತಲೂ ಒತ್ತಾಯ ಬಂತು. ಅದಕ್ಕೆ ತಕ್ಷಣ ದೊಡ್ಡ ನಾಯಕರು ಉತ್ತರಿಸಿದರು. ಅವ್ನ್ ಸರ್ಮಾಡಾದೇನ್ ಮಹಾದೊಡ್ಡ ಕೆಲ್ಸ ನೇನ್ರಿ? ನನ್ನ ಮಗುನ್ನ ಹಂಗಿಟ್ಟಿರ್ಬೇಕೊಂಬ್ತ ನಂಗೊತ್ತು. ಆ ಮಲ್ಲಿ ಮದ್ವೇನೂ ಗುಟ್ಟಾಗಾಗೋದ್ ಬೇಡ. ನನ್ ಮಗುನ್ನೇ ಎಲ್ಲಾನ ಕಲ್ಲಾನ ಕಳ್ಸಿ ಅವಳ ಮದ್ವೇನ ರಾಜಾರೋಷವಾಗಿ ಮಾಡ್ತೀನಿ. ನಾನೇ ಮುಂದೆ ನಿಂತು ಹರಿಜನ ಸೇವೆ ಮಾಡ್ತೀನಿ. ಈಗೇನೊ ಹೀಗಿದ್ದೀವಿ ಅಂತ ಗಾಂಧಿ ಹೇಳಿದ್ದು ಪೂರ್ತಿ ಬಿಡುಕಾಗ್ತೈತ? ಎಂದರು.

ಅಂದದ್ದಷ್ಟೇ ಅಲ್ಲ, ಹಾಗೇ ಮಾಡಿಬಿಟ್ಟರು. ಹನುಮನನ್ನು ಕರೆಸಿ ಚೆನ್ನಾಗಿ ಬಯ್ದರು. ಮಗಳನ್ನ ಹುಟ್ಟಿಸ್ದಲ್ಲ, ಹದ್ದುಬಸ್ತಿನಾಗ್ ಇಡಾಕ್ ಬರಲ್ವೇನೂ ಬಡ್ತಿ ಮಗ್ನೆ ಎಂದು ಜಗ್ಗಿಸಿದರು. ಇದೇ ಮಾತನ್ನು ಇವರಿಗೆ ಅವನೂ ಕೇಳಬಹುದಾಗಿತ್ತಾದರೂ ಬಾಯಿಲ್ಲದ ಬದುಕು ಅವನದು.

ಇದಾದ ಮೇಲೆ ಒಲ್ಲದ ಮಲ್ಲಿಗೆ ಮದುವೆಯೂ ಆಯ್ತು. ದೂರದೂರಿಗೆ ಕಳಿಸಲ್ಪಟ್ಟಿದ್ದ ಸಂಗಪ್ಪ ವಾಪಸ್ ಬಂದದ್ದೂ ಆಯ್ತು. ಬಂದಾಗ ವಿಷಯ ಗೊತ್ತಾಯ್ತು. ಸಂಗಪ್ಪ ಹೌಹಾರಿದ. ಅಪ್ಪನ ಬಳಿ ಜಗಳಾಡಿದ. ಅಪ್ಪ ಇದಕ್ಕಿಂತ ಅಪರಂಜಿ ಹೆಣ್ಣುಗಳ ತಂದು ಸಾಲು ಸಾಲು ನಿಲ್ಲುಸ್ತೀನಿ ಸುಮ್ಕಿರು ಎಂದ. ಆದರೂ ಸಂಗಪ್ಪ ಸುಮ್ಮನಿರಲಿಲ್ಲ, ಗಡ್ಡ ಬಿಡಿಸಿದ. ಗುಡ್ಡ ಹತ್ತಿದ. ಕೂತು ಚಿಂತಿಸಿದ. ಹೊಲವೆಲ್ಲಾ ತಿರುಗಾಡಿದ. ಭಗ್ನ ಪ್ರೇಮಿಯ ಎಲ್ಲಾ ಲಕ್ಷಣಗಳನ್ನೂ ಪ್ರಕಟಿಸಿದ. ಇನ್ನೇನೂ ಹೊಳೆಯದಿದ್ದಾಗ ಮೊದಲಿನಂತಾಗ ಹತ್ತಿದ. ಕೂಡಲೆ ಅವರಪ್ಪ ರಂಗು ರಂಗಿನ ಹೆಣ್ಣುಗಳನ್ನು ತೋರಿಸಿ, ಹುಚ್ಚು ಹತ್ತಿಸಿ ಒಂದು ಅದ್ದೂರಿ ಮದುವೆ ಮಾಡಿಬಿಟ್ಟ.

ಮದುವೆಯಾದ ಮೇಲೆ ಇವನ ಮನಸ್ಸಿನ ಬೀಗದ ಕೈ ಹೆಂಡತಿಯ ಕೈಗೆ ಬಂತು. ಅಪ್ಪ-ಹೆಂಡತಿ ಇಬ್ಬರೂ ಸೇರಿ ಸಂಗಪ್ಪನನ್ನು ತಮ್ಮ ಪ್ರತಿಷ್ಠೆಯ ಹಾದಿಗೆ ಹಚ್ಚಿದರು. ಊರಿನ ಯುವರಾಜನಂತೆ ಮೆರೆಯಲು ಸಿದ್ಧಗೊಳಿಸಿದರು. ಊರಲ್ಲಿ ಯಾರೆಂದರೆ ಅವರ ಜೊತೆ ಓಡಾಡುವುದನ್ನು ತಪ್ಪಿಸಿದರು. ಆಸ್ತಿ-ಪಾಸ್ತಿಯ ಉಸ್ತುವಾರಿ ಕೊಟ್ಟರು. ಚನ್ನಾಗಿ ರುಚಿ ಹತ್ತುತ್ತ ಬಂದ ಸಂಗಪ್ಪ ಯಾವ ಸ್ಥಿತಿಗೆ ಬಂದನೆಂದರೆ ಅಪ್ಪ ಇರುವಾಗಲೇ ಮಹಾರಾಜನಾದ. ಅಪ್ಪ ಹೋದ ಮೇಲಂತೂ ಏಕೈಕ ವೀರನಾದ, ಈಗ ಎದುರಾಗ ಯಾರೂ ಸೈಕಲ್ ಹತ್ತಿ ಹೋಗಬಾರದೆಂಬ ಹದ್ದುಬಸ್ತು ಹಾಕುವ ಮಟ್ಟ ಮುಟ್ಟಿದ್ದ. ಸದ್ಯಕ್ಕೆ ಮಣ್ಣು ಮುಕ್ಕಿದ್ದ.

# ನೇಪಾಳ ಹಂಗಾಮಿ ಪ್ರಧಾನಿ ಸುಶೀಲಾ ಕಾರ್ಕಿ ಅಧಿಕಾರ ಸ್ವೀಕಾರ

## ಆರು ತಿಂಗಳ ಅಧಿಕಾರ ಅವಧಿ | ಭ್ರಷ್ಟಾಚಾರ ನಿರ್ಮೂಲನೆ ಪಣ

• ಪ್ರಜೋದಯ ವರದಿ

**ಕಠ್ಮಂಡು:** ನೇಪಾಳದ ಮಧ್ಯಂತರ ಸರ್ಕಾರದ ಪ್ರಧಾನಿಯಾಗಿ ಸುಶೀಲಾ ಕಾರ್ಕಿ ಅವರು ಭಾನುವಾರ ಅಧಿಕೃತವಾಗಿ ಅಧಿಕಾರ ವಹಿಸಿ ಕೊಂಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು 6 ತಿಂಗಳಷ್ಟೇ ಅಧಿಕಾರದಲ್ಲಿರುತ್ತೇವೆ. ನಮ್ಮ ಅವಧಿಯಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಮಾಡೇ ಮಾಡುತ್ತೇವೆ. ಜೊತೆಗೆ, ಜೆನ್‌ಝಿ ಗುಂಪಿನ ಪ್ರತಿನಿಧಿಗಳ ಚಿಂತನೆಗಳಿಗೆ ಅನುಗುಣವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆಂದು ಅವರು ಪ್ರತಿಜ್ಞೆ ಮಾಡಿದ್ದಾರೆ. ದೇಶದಲ್ಲಿ ಭ್ರಷ್ಟಾಚಾರವನ್ನು ಕೊನೆಗಾಣಿಸುವುದು, ಉತ್ತಮ ಆಡಳಿತ ನಡೆಸುವುದು ಮತ್ತು ಆರ್ಥಿಕ ಸಮಾನತೆ ಸಾಧಿಸುವುದು ಜೆನ್‌ಝಿ ಗುಂಪಿನ ಪ್ರಮುಖ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಎಲ್ಲರೂ ಒಟ್ಟಾಗಿ ದೃಢ ನಿಶ್ಚಯದೊಂದಿಗೆ ಕೆಲಸ ಮಾಡುತ್ತೇವೆ ಎಂದು 73 ವರ್ಷದ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸುಶೀಲಾ ಕಾರ್ಕಿ ಅವರು ಹೇಳಿದ್ದಾರೆ.

2026ರ ಮಾ.5ರಂದು ನೇಪಾಳದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದೆ. ಈ ಹಿನ್ನಲೆಯಲ್ಲಿ ನಾನು ಮತ್ತು ನಮ್ಮ ಮಧ್ಯಂತರ ಸರ್ಕಾರ ಆರು ತಿಂಗಳಿಗಿಂತ ಹೆಚ್ಚು ಕಾಲ ಅಧಿಕಾರದಲ್ಲಿರುವುದಿಲ್ಲವೆಂದು ಅವರು ಸ್ಪಷ್ಟಪಡಿಸಿದ್ದಾರೆ.

ನೇಪಾಳದ ಮಧ್ಯಂತರ ಸರ್ಕಾರದ ನೂತನ



ಪ್ರಧಾನಿಯಾಗಿ ಸುಶೀಲಾ ಕಾರ್ಕಿ ಶುಕ್ರವಾರ ರಾತ್ರಿ ಪ್ರಮಾಣ ವಚನ ಸ್ವೀಕರಿಸಿದ್ದರು. ನೇಪಾಳದ ಮೊದಲ ಮಹಿಳಾ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಕಾರ್ಕಿ ಅವರಿಗೆ ಅಧ್ಯಕ್ಷ ರಾಮಚಂದ್ರ ಪೌದೆಲ್, ಉಪಾಧ್ಯಕ್ಷ ರಾಮ ಸಹಾಯ್ ಯಾದವ್, ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪ್ರಕಾಶ್ ಮಾನ್ ಸಿಂಗ್ ರಾವತ್, ಭಾರತ ಪ್ರಧಾನಿ ನರೇಂದ್ರ ಮೋದಿ ಸೇರಿ ಅನೇಕರು ಶುಭ ಹಾರೈಸಿದ್ದಾರೆ.

ಜೆನ್‌ಝಿ ಪ್ರತಿಭಟನೆಯಿಂದಾಗಿ ಈ ವಾರದ ಆರಂಭದಲ್ಲಿ ಪ್ರಧಾನಿ ಕೆ.ಪಿ.ಶರ್ಮಾ ಓಲಿ ಅವರ ದಿಢೀರ್ ರಾಜೀನಾಮೆ ನಂತರ ನೇಪಾಳದಲ್ಲಿ ತಲೆದೋರಿದ್ದ ರಾಜಕೀಯ ಅನಿಶ್ಚಿತತೆ ಸದ್ಯ ತಣ್ಣಗಾಗಿದೆ.

**ವಾರಾಣಾಸಿಯೊಂದಿಗೆ ಕಾರ್ಕಿ ನಂಟು**


ನೇಪಾಳದ ಮೊದಲ ಮಹಿಳಾ ಪ್ರಧಾನಿಯಾಗಿರುವ ಸುಶೀಲಾ ಕಾರ್ಕಿ (73) ಅವರು ವಾರಾಣಸಿಯೊಂದಿಗೆ ಅವಿನಾಭಾವ ನಂಟನ್ನು ಹೊಂದಿದ್ದಾರೆ. ಮಾಧ್ಯಮವೊಂದಕ್ಕೆ ಇತ್ತೀಚೆಗೆ ನೀಡಿದ ಸಂದರ್ಶನದಲ್ಲಿ ಅವರು ಭಾರತದ ಸ್ನೇಹಿತೆ ಎಂದು ತಮ್ಮನ್ನು ಕರೆದು ಕೊಂಡಿದ್ದಾರೆ. ಇದೇ ಸಂದರ್ಭದಲ್ಲಿ ಉತ್ತರ ಪ್ರದೇಶದ ವಾರಾಣಸಿಯಲ್ಲಿರುವ ಪ್ರತಿಷ್ಠಿತ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ (ಬಿಎಚ್‌ಯು) ಸ್ನಾತಕೋತ್ತರ ಪದವಿ ಪಡೆದಿ ರುವುದಾಗಿ ಮತ್ತು ಇದೇ ವೇಳೆ ತಮ್ಮ ಜೀವನ ಸಂಗಾತಿಯನ್ನು ಭೇಟಿ ಮಾಡಿದ್ದಾಗಿ ತಿಳಿಸಿದ್ದಾರೆ.

ಕಾರ್ಕಿ ಅವರು 1975ರಲ್ಲಿ ಬಿಎಚ್‌ಯುನಲ್ಲಿ ರಾಜಕೀಯಶಾಸ್ತ್ರ ಎಂ.ಎ. ವ್ಯಾಸಂಗ ಮಾಡುತ್ತಿದ್ದರು. ಅದೇ ಸಂದರ್ಭದಲ್ಲಿ ನೇಪಾಳದ ರಾಜ ಪ್ರಭುತ್ವ ವಿರೋಧಿ ಪ್ರತಿಭಟನೆಗೆ ವಾರಾಣಸಿ ಕೇಂದ್ರವಾಗಿತ್ತು. ಕಾರ್ಕಿ ಅವರು ಈ ಚಳವಳಿಯಲ್ಲಿ ಭಾಗಿಯಾಗಿದ್ದರೆಂದು ಬಿಎಚ್‌ಯುನ ನಿವೃತ್ತ ಪ್ರಾಧ್ಯಾಪಕ ದೀಪಕ್ ಮಲ್ಲಿಕ್ ತಿಳಿಸಿದರು.

**ಮಾ.5ಕ್ಕೆ ಸಾರ್ವತ್ರಿಕ ಚುನಾವಣೆ**

ರಾಷ್ಟ್ರದಲ್ಲಿ ಮುಂದಿನ ಸಾರ್ವತ್ರಿಕ ಚುನಾವಣೆ 2026ರ ಮಾರ್ಚ್ 5ರಂದು ನಡೆಯಲಿದೆ ಎಂದು ಅಧ್ಯಕ್ಷ ರಾಮಚಂದ್ರ ಪೌದೆಲ್ ಅವರ ಕಚೇರಿ ಘೋಷಿಸಿದೆ.
ಹಂಗಾಮಿ ಪ್ರಧಾನಿ ಸುಶೀಲಾ ಕಾರ್ಕಿ ಅವರ ಶಿಫಾರಸಿನ ಮೇರೆಗೆ ಶುಕ್ರವಾರ ತಡರಾತ್ರಿಯೇ ಸಂಸತ್ತನ್ನು ಅಧ್ಯಕ್ಷ ಪೌದೆಲ್ ವಿಸರ್ಜಿಸಿದ್ದರು. ಈ ಸಂಬಂಧ ಅಧ್ಯಕ್ಷರ ಕಚೇರಿ ಪ್ರಕಟಣೆ ಹೊರ ಡಿಸಿದೆ. 2025ರ ಸೆ.12ರ ರಾತ್ರಿ 11 ರಿಂದ ಅನ್ವಯವಾಗುವಂತೆ ಸಂಸತ್ ಅನ್ನು ವಿಸರ್ಜಿಸಲಾ ಗುತ್ತಿದ್ದು, 2026ರ ಮಾರ್ಚ್ 5ಕ್ಕೆ ಸಾರ್ವತ್ರಿಕ ಚುನಾವಣೆಯನ್ನು ನಿಗದಿಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಅಸ್ಸಾಂನಲ್ಲಿ ಭೂಕಂಪ



• ಪ್ರಜೋದಯ ವರದಿ

**ಗುವಾಹಟಿ:** ಅಸ್ಸಾಂನ ಗುವಾಹಟಿಯಲ್ಲಿ ಭೂಕಂಪ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ 5.8ರಷ್ಟು ತೀವ್ರತೆ ದಾಖಲಾಗಿದೆ. ಭೂಕಂಪದಿಂದ ಹಾನಿಯಾದ ಬಗ್ಗೆ ತಕ್ಷಣಕ್ಕೆ ವರದಿಯಾಗಿಲ್ಲ.

ಭಾನುವಾರ ಸಂಜೆ 4.41ರ ಹೊತ್ತಿಗೆ ಭೂಮಿ ಕಂಪಿಸಿದ ಅನುಭವವಾಗಿದೆ. 5 ಕಿ.ಮೀ ಆಳದಲ್ಲಿ ಭೂಕಂಪನದ ಕೇಂದ್ರ ಬಿಂದು ಪತ್ತೆಯಾಗಿದೆ ಎಂದು ರಾಷ್ಟ್ರೀಯ ಭೂಕಂಪನ ಶಾಸ್ತ್ರ ಕೇಂದ್ರ ತಿಳಿಸಿದೆ.

ಭೂಕಂಪದ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಕೇಂದ್ರ ಸಚಿವ ಸರ್ಬಾನಂದ ಸೋನೊವಾಲ್, ಅಸ್ಸಾಂನಲ್ಲಿ ಪ್ರಬಲ ಭೂಕಂಪ ಸಂಭವಿಸಿದೆ. ಎಲ್ಲರೂ ಸುರಕ್ಷಿತವಾಗಿ, ಎಚ್ಚರಿಕೆಯಿಂದಿರಿ ಎಂದು ಸಾಮಾಜಿಕ ಮಾಧ್ಯಮದಲ್ಲಿ ಬರೆದು ಕೊಂಡಿದ್ದಾರೆ.

## ಚಾಂಪಿಯನ್‌ಶಿಪ್‌ನಲ್ಲೂ ಭಾರತ-ಪಾಕಿಸ್ತಾನ ಮುಖಾಮುಖಿ



• ಪ್ರಜೋದಯ ವರದಿ

**ಟೋಕಿಯೊ:** ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪಾಕಿಸ್ತಾನ ವಿರುದ್ಧ ಭಾರತ ಆಡುತ್ತಿರು ವುದಕ್ಕೆ ಭಾರಿ ವಿರೋಧ ವ್ಯಕ್ತವಾಗುತ್ತಿರುವ ನಡುವೆಯೇ ಮತ್ತೊಂದೆಡೆ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲೂ ಭಾರತ ಹಾಗೂ ಪಾಕಿಸ್ತಾನ ಸ್ಪರ್ಧಿಗಳ ನಡುವಣ ಪೈಪೋಟಿಗೆ ವೇದಿಕೆ ಸಜ್ಜುಗೊಂಡಿದೆ.

ಜಪಾನ್‌ನ ಟೋಕಿಯೋದಲ್ಲಿ ನಡೆಯುತ್ತಿರುವ ವಿಶ್ವ ಚಾಂಪಿಯನ್‌ಶಿಪ್‌ನ ಪುರುಷರ ವಿಭಾಗದ ಜಾವೆಲಿನ್ ಥ್ರೊ ಸ್ಪರ್ಧೆಯಲ್ಲಿ ಭಾರತದ ತಾರೆ ನೀರಜ್ ಚೋಪ್ರಾ ಹಾಗೂ ಪಾಕಿಸ್ತಾನದ ಅರ್ಷದ್ ನದೀಮ್ ಮುಖಾಮುಖಿಯಾಗಲಿದ್ದಾರೆ. ಈ ಕೂಟದಲ್ಲಿ ಅತ್ಯಂತ ನಿಕಟವಾದ ಪೈಪೋಟಿ ಸಾಧ್ಯತೆಯಿದ್ದು, ಇಬ್ಬರು ಚಿನ್ನ ಗೆಲ್ಲುವ ನಿರೀಕ್ಷೆ ಹೊಂದಿದ್ದಾರೆ.

ಸೆಪ್ಟೆಂಬರ್ 18ರಂದು ನಡೆಯುವ ಜಾವೆಲಿನ್ ಥ್ರೊ ಫೈನಲ್‌ನಲ್ಲಿ ಚಿನ್ನ ಗೆದ್ದರೆ ನೀರಜ್ ಅವರು ಸತತ ಕೂಟಗಳಲ್ಲಿ ಚಿನ್ನ ಗೆದ್ದಂತಾಗಲಿದೆ. ಈ ಟೂರ್ನಿಯಲ್ಲಿ ಭಾರತದ ನಾಲ್ವರು ಕಣದಲ್ಲಿದ್ದಾರೆ. ಸಚಿನ್ ಯಾದವ್, ಯಶವೀರ್ ಸಿಂಗ್ ಮತ್ತು ರೋಹಿತ್ ಯಾದವ್ ಸಹ ತಮ್ಮ ಸಾಮರ್ಥ್ಯ ಪ್ರದರ್ಶನ ಮಾಡಲಿದ್ದಾರೆ.

2023ರ ಬುಡಾಪೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ನೀರಜ್ 88.17 ಮೀ. ಎಸೆದು ಸ್ವರ್ಣ ವಿಜೇತರಾಗಿದ್ದರು. ಪಾಕಿಸ್ತಾನದ ಅರ್ಷದ್ ನದೀಮ್ (87.62 ಮೀ.) ಮತ್ತು ಝೆಕ್ ರಿಪಬ್ಲಿಕ್‌ನ ಯಾಕೂಬ್ ವಾಡ್ಲೆಚ್ (86.67 ಮೀ.) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿ ಕೊಂಡಿದ್ದರು.


ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನೀರಜ್ ಹಿಂದಿಕ್ಕಿದ ನದೀಮ್ ಚಿನ್ನ ಗೆದ್ದಿದ್ದರು. ಒಂದು ವರ್ಷದ ನಂತರ ಈಗ ನೀರಜ್ ಮತ್ತು ನದೀಮ್ ನಡುವೆ ಸ್ಪರ್ಧೆ ನಡೆಯಲಿದೆ. ಪ್ಯಾರಿಸ್‌ನಲ್ಲಿ ನೀರಜ್ ಬೆಳ್ಳಿ ಪದಕ ಗೆದ್ದಿದ್ದರು. 2021ರಲ್ಲಿ ಒಲಿಂಪಿಕ್ ಚಿನ್ನ ಗೆದ್ದು ನೀರಜ್ ಚೋಪ್ರಾ ಇತಿಹಾಸ ನಿರ್ಮಿಸಿದ್ದರು.

# ಗಂಡಸಿಯಲ್ಲಿ ಅದ್ದೂರಿ ಗಣೇಶ ವಿಸರ್ಜನಾ ಮೆರವಣಿಗೆ

• ಪ್ರಜೋದಯ ವರದಿ

ಅರಸೀಕೆರೆ: ತಾಲ್ಲೂಕಿನ ಗಂಡಸಿಯಲ್ಲಿ ಓಂ ಶ್ರೀ ಗಣಪತಿ ಉತ್ಸವ ಸಮಿತಿ ಹಾಗು ಚಾಲೆಂಜ್ ಬಾಯ್ಸ್ ಗಂಡಸಿ ವತಿಯಿಂದ ಶ್ರೀ ದೊಡ್ಡಮ-ಚಿಕ್ಕಮ್ಮದೇವಿ ದೇವಾಲಯದ ಬಳಿ ಪ್ರತಿಷ್ಠಾಪಿ ಸಿದ್ದ 18ನೇ ವರ್ಷದ ಗಣೇಶ ಮೂರ್ತಿ ವಿಸರ್ಜನಾ ಉತ್ಸವ ಶನಿವಾರ ರಾತ್ರಿ ನಡೆಯಿತು.

ಉತ್ಸವದ ಪ್ರಯುಕ್ತ ಪ್ರತಿ ಬೀದಿಗಳಲ್ಲಿ ನಾರಿಮಣಿಯರು ರಂಗೋಲಿ ಚಿತ್ತಾರ ಬಿಡಿಸಿದ್ದರು. ಬಣ್ಣ ಬಣ್ಣದ ವಿದ್ಯುದೀಪಗಳ ಅಲಂ ಕಾರ ಆಕರ್ಷಕವಾಗಿತ್ತು. ಪ್ರಮುಖ ರಾಜ ಬೀದಿಗಳಲ್ಲಿ ಸಡಗರ ಸಂಭ್ರಮದಿಂದ



ಅದ್ದೂರಿಯಾಗಿ ಉತ್ಸವ ಮಾಡಿ ಭಾನುವಾರ ಬೆಳಿಗ್ಗೆ ಗಂಡಸಿ ದೊಡ್ಡ ಕೆರೆಯಲ್ಲಿ ಶ್ರೀ ಸ್ವಾಮಿ ಅವರನ್ನು ಸಕಲ ಬಿರುದಾವಳಿ ಮತ್ತು ವೇದ ಘೋಷಗಳ ಘೋಷಣೆ ಯೊಂದಿಗೆ ವಿಸರ್ಜಿಸಲಾಯಿತು. ರಾತ್ರಿ 10 ಗಂಟೆಗೆ ಪ್ರಾರಂಭವಾದ ಮೆರವಣಿಗೆಯಲ್ಲಿ ಯುವಕ ಯುವತಿಯರು ಹಿಂದೂ-ಮುಸ್ಲಿಂ ಎಂಬ ಭೇದ ಭಾವವಿಲ್ಲದೆ ಭಾವೈಕ್ಯತೆಯಿಂದ ಡಿ.ಜೆ.ಸೌಂಡಿಗೆ ಕುಣಿದು ಕುಪ್ಪಳಿಸಿದರು.

ಡೊಳ್ಳು ಕುಣಿತ, ವೀರಭದ್ರನ ಕುಣಿತ, ವೀರಗಾಸೆ ನರ್ತನ, ಕರಡೆ ವಾದ್ಯ, ಚಂಡೆ ವಾದ್ಯ ಕೀಲುಕುದುರೆ ನರ್ತನ, ತಮಟೆ ವಾದ್ಯದ ಸದ್ದಿಗೆ ಯುವಕರು ಸಂಭ್ರಮದಿಂದ ಹೆಜ್ಜೆ ಹಾಕಿದರು. ಗಂಡಸಿ ಬಸವೇಶ್ವರ ವೃತ್ತದ ಬಳಿ ಅನ್ನದಾಸೋಹ ಏರ್ಪಡಿಸಲಾಗಿತ್ತು. ಶಾಸಕ ಕೆ.ಎಂ.ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್ ಅವರು ಪಾಲ್ಗೊಂಡಿದ್ದರು.

# ಬಸವ ಸಂಸ್ಕೃತಿ ಅಭಿಯಾನಕ್ಕೆ ಚಾಲನೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ಹಾಸನ ನಗರದಲ್ಲಿ ನಡೆಯಲಿರುವ ಬಸವೇಶ್ವರರ ಸಂಸ್ಕೃತಿ ಅಭಿ ಯಾನಕ್ಕೆ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಅವರು ಚಾಲನೆ ನೀಡಿದರು.

ಪಟ್ಟಣದ ಶ್ರೀವೀರಭದ್ರೇಶ್ವರ ಕಲ್ಯಾಣ ಮಂದಿರದಲ್ಲಿ ಬಸವ ಸಂಸ್ಕೃತಿ ಅಭಿಯಾನಕ್ಕೆ ಚಾಲನೆ ನೀಡಿ ಆಶೀರ್ವಚನ ನೀಡಿದರು. ಹಾಸನಾಂಬ ಕಲಾಕ್ಷೇತ್ರದಲ್ಲಿ ಸೆ.21 ರಂದು ಕಾರ್ಯಕ್ರಮ ಆಯೋಜಿಸಲಾಗಿದೆ. ಪೂರ್ವಭಾವಿಯಾಗಿ ಅಭಿಯಾನದ ರಥಗಳು ತಾಲ್ಲೂಕಿ ನಲ್ಲಿ ಸಂಚರಿಸಲಿದೆ. ವಿಶ್ವಗುರು ಜಗಜ್ಯೋತಿ ಬಸವೇಶ್ವರರನ್ನು ರಾಜ್ಯ ಸರ್ಕಾರ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿರುವುದು ಹೆಮ್ಮೆಯ ವಿಷಯ. ಬಸವ ತತ್ವದ ಜೊತೆಗೆ ಜನರಿಗೆ ಪುನರ್ ಮನನ ಮಾಡಲು ಅಭಿಯಾನ ನಡೆಸಲಾ ಗುವುದು. ಅದರೊಂದಿಗೆ ಜಿಲ್ಲಾ ಹಂತದಲ್ಲಿ ಸಾಂಸ್ಕೃತಿಕ ನಾಯಕ



ಬಸವೇಶ್ವರ ಹೆಸರಿನಲ್ಲಿ ಕಾರ್ಯಕ್ರಮ ರೂಪಿಸಲಾಗುತ್ತಿದೆ. ರಾಜ್ಯದ ನಾನಾ ಮಠದ ಸ್ವಾಮೀಜಿಗಳು, ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗಿಯಾಗುವಂತೆ ಕೋರಿದರು.

ಅರಕಲಗೂಡು ದೊಡ್ಡಮಠದ ಶ್ರೀಮಲ್ಲಿಕಾರ್ಜುನ ಸ್ವಾಮೀಜಿ, ತೇಜೂರು ಸಿದ್ದರಾಮೇಶ್ವರ ಮಠದ ಶ್ರೀ ಕಲ್ಯಾಣಸ್ವಾಮಿ ಸಾನಿಧ್ಯವಹಿಸಿದ್ದರು. ವೀರಶೈವ ಮುಖಂಡರಾದ ಜಯಣ್ಣ, ಸಾಹಿತಿ ಗುಂಜೇವು ಅಣ್ಣಾಜಪ್ಪ ಹಾಗೂ ವೀರಶೈವ ಮಹಿಳಾ ಜಿಲ್ಲಾಅಧ್ಯಕ್ಷೆ ಚಂದ್ರಮತಿ ಉಪಸ್ಥಿತರಿದ್ದರು.

# ಸೋಲು-ಗೆಲುವು ಸಮಾನವಾಗಿ ಸ್ವೀಕರಿಸಿ

## ತಾಲ್ಲೂಕು ಮಟ್ಟದ ಹಿರಿಯ ಪ್ರಾಥಮಿಕ ಶಾಲಾ-ಪ್ರೌಢಶಾಲೆಗಳ ಕ್ರೀಡಾಕೂಟದಲ್ಲಿ ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಸಕಲೇಶಪುರ:** ಸೋಲು-ಗೆಲುವು ಕ್ರೀಡೆಯಲ್ಲಿ ಸಹಜ. ಫಲಿತಾಂಶ ಏನೇ ಬಂದರೂ ಕ್ರೀಡಾಪಟುಗಳು ಕ್ರೀಡಾ ಸ್ಫೂರ್ತಿಯಿಂದ ಸ್ವೀಕರಿಸಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ಸುಭಾಷ್ ಮೈದಾನದಲ್ಲಿ ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಹಾಗು ದೈಹಿಕ ಶಿಕ್ಷಣ ಶಿಕ್ಷಕರ ಸಂಘದಿಂದ ಆಯೋಜಿಸಿದ್ದ ತಾಲ್ಲೂಕು ಮಟ್ಟದ ಹಿರಿಯ ಪ್ರಾಥಮಿಕ ಶಾಲೆ ಹಾಗು ಪ್ರೌಢಶಾಲೆಗಳ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿ, ಸೋಲು- ಗೆಲುವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಅವುಗಳನ್ನು ಸಮಾನ ಮನೋಭಾವದಿಂದ ನೋಡಿದಾಗ ಮಾತ್ರ ಕ್ರೀಡೆಯಲ್ಲಿ ತೊಡಗಿಕೊಳ್ಳಲು ಸಾಧ್ಯ. ಶಿಕ್ಷಣದ ಜೊತೆಗೆ ಕ್ರೀಡೆ ಅಗತ್ಯ. ಉತ್ತಮ ಆರೋಗ್ಯವಿರುವ ದೇಹದಲ್ಲಿ ಆರೋಗ್ಯಕರ ಮನಸ್ಸು ಇರುತ್ತದೆ. ಕ್ರೀಡೆಯನ್ನು ಕ್ರೀಡೆ ಯಾಗಿ ಸ್ವೀಕರಿಸಿ, ತೀರ್ಪುಗಾರರ ತೀರ್ಪು ಗೌರವಿಸಿ, ಸಂತೋಷದಿಂದ ಕ್ರೀಡಾಕೂಟದಲ್ಲಿ ಪಾಲ್ಗೊಂಡು ನಂತರ ಶಾಲೆಗೆ ಹಿಂತಿರುಗಬೇಕೆಂದು ಹೇಳಿದರು.

ಜೀವನದಲ್ಲಿ ಕ್ರೀಡೆ ಪ್ರಮುಖ



ಪಾತ್ರ ವಹಿಸುತ್ತದೆ. ನಿರಂತರ ಕ್ರೀಡೆ, ವ್ಯಾಯಾಮದಿಂದ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಹಿಂದಿನ ದಿನಗಳಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ನಮ್ಮ ದೇಶ ಅಷ್ಟಾಗಿ ಸಾಧನೆ ಮಾಡುತ್ತಿರಲಿಲ್ಲ. ಈಗ ಕೇಂದ್ರ ಸರ್ಕಾರ ಕ್ರೀಡಾಪಟುಗಳಿಗೆ ಹೆಚ್ಚಿನ ಸವಲತ್ತು ನೀಡುತ್ತಿರುವುದರಿಂದ, ಕ್ರೀಡೆಯಲ್ಲಿ ಭಾರತ ಗಮನಾರ್ಹ ಸಾಧನೆ ಮಾಡುತ್ತಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪಾ ಅವರು ಮಾತನಾಡಿ, ಓದಿನ ಜೊತೆಗೆ ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ಅಗತ್ಯ. ವಿದ್ಯಾರ್ಥಿಗಳು ಯಾವುದಾದರೂ ಒಂದು ಕ್ರೀಡೆಯಲ್ಲಿ ತೊಡಗಿಸಿ ಕೊಂಡರೆ ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ತಾಲ್ಲೂಕು ಮಟ್ಟದಲ್ಲಿ ಗೆದ್ದ ವಿದ್ಯಾರ್ಥಿಗಳು ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಸಾಧನೆ ಮಾಡ ಬೇಕೆಂದು ಹೇಳಿದರು.

ದೈಹಿಕ ಶಿಕ್ಷಣ ಪರಿವೀಕ್ಷಕ ಕುಶ್ವಂತ್, ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ತಮ್ಮಣ್ಣ ಶೆಟ್ಟಿ, ಗ್ರಾಮ ಪಂಚಾಯಿತಿ ಸದಸ್ಯ ಕಾರ್ತಿಕ್, ಖಾಸಗಿ ಶಾಲೆಗಳ ಒಕ್ಕೂಟದ ತಾಲ್ಲೂಕು ಅಧ್ಯಕ್ಷ ಮಲ್ನಾಡ್ ಜಾಕೀರ್, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಸಂಯೋಜಕ ಮಂಜುನಾಥ್, ಟಸ್ಕೇ ರಿಯಾ ಅಕಾಡೆಮಿಯ ಗಿರೀಶ್ ಇತರರಿದ್ದರು.

# ಶಿಕ್ಷಣಕ್ಷೇತ್ರಕ್ಕೆ ಒತ್ತು: ಹೆಚ್.ಡಿ.ರೇವಣ್ಣ

• ಪ್ರಜೋದಯ ವರದಿ

**ಹೊಳೆನರಸೀಪುರ:** ನಾನು ಶಿಕ್ಷಣ ಮಂತ್ರಿಯಾಗದೇ ಇರಬಹುದು, ನನ್ನ ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಸಾಕಷ್ಟು ಒತ್ತು ನೀಡಿದ್ದೇನೆಂದು ಶಾಸಕ ಹೆಚ್.ಡಿ.ರೇವಣ್ಣ ಅವರು ತಿಳಿಸಿದರು.

ಪಟ್ಟಣದಲ್ಲಿ ಆಯೋಜಿಸಲಾಗಿದ್ದ ಶಿಕ್ಷಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ 7 ಪದವಿ ಕಾಲೇಜುಗಳು, 3 ಪಾಲಿಟೆಕ್ನಿಕ್, ಇಂಜಿನೀಯರಿಂಗ್ ಹಾಗೂ ಮುರಾರ್ಜಿ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಿವೆ. ರಾಜ್ಯದ ಯಾವು ದಾದರೂ ಕ್ಷೇತ್ರದಲ್ಲಿ 7 ಕೆಪಿಎಸ್ ಶಾಲೆಗಳಿವೆ ಎಂದರೆ ಅದು ನನ್ನ ಕ್ಷೇತ್ರದಲ್ಲಿ ಮಾತ್ರ. ರಾಜ್ಯದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಯಾಗಿದ್ದಾಗ ಶಿಕ್ಷಣ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ರಾಜ್ಯ ಸರ್ಕಾರ ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಇಲಾಖೆ ಯಲ್ಲೂ ದುಡ್ಡು ಹೊಡೆಯುವ ಕಾಯಕ ನಡೆಸಿದೆ. ಪಿಡಬ್ಲ್ಯೂಡಿ ಇಲಾಖೆ ಬದಲಿಗೆ ಹೌಸಿಂಗ್ ಬೋರ್ಡ್‌ನವರಿಗೆ ಕಾಮಗಾರಿ ಗಳನ್ನು ವಹಿಸುವ ಮೂಲಕ ಶೇ.12 ರಷ್ಟು ಕಮಿಷನ್ ಪಡೆಯುತ್ತಿದೆ ಎಂದರು.

ಈಗಲೂ ಕಾಲ ಮಿಂಚಿಲ್ಲ. ಸರ್ಕಾರಿ ಶಾಲೆಗಳನ್ನು ಬಾಗಿಲು ಹಾಕುವ ಬದಲಿಗೆ ಶಿಕ್ಷಣ ಮಂತ್ರಿ ಮಧುಬಂಗಾರಪ್ಪ ಶಾಲೆಗಳಿಗೆ ಸವಲತ್ತು ನೀಡಲಿ. ಅವರೆಲ್ಲಾ ಸೂಟೂ, ಬೂಟು ಮಂತ್ರಿಗಳು. ಅವರ ತಂದೆ ಉತ್ತಮರಿದ್ದರು. ಅವರು ನನಗೆ ಆಪ್ತರಿದ್ದರು ಎಂದು ಸ್ಮರಿಸಿದರು.

ತಾಲ್ಲೂಕಿನ ಮೊಸಳೆಹೊಸಳ್ಳಿ ಗ್ರಾಮದಲ್ಲಿ ಗಣಪತಿ ವಿಸರ್ಜನೆ ವೇಳೆ ಕ್ಯಾಂಟರ್ ಚಾಲಕ ಎಣ್ಣೆಹೊಡೆದು ಮೆರವಣಿಗೆಯಲ್ಲಿ ಇದ್ದವರ ಮೇಲೆ ವಾಹನ ಹರಿಸಿದ್ದಾನೆ. ಇಂಜೀನೀಯರ್ ವಿದ್ಯಾರ್ಥಿಗಳು ಸೇರಿ 10 ಸಾವು, 20 ಜನರಿಗೆ ಗಂಭೀರ ಗಾಯಗಳಾಗಿವೆ. ಈ ಸಂದರ್ಭದಲ್ಲಿ ನಾವು ಕಾರ್ಯಕ್ರಮ ನಡೆಸಬೇಕಾಗಿದೆ. ಆ ಘೋರ ದುರಂತ, ಸತ್ತವರ ಕುಟುಂಬಸ್ಥರ ಆಕ್ರಂ ಧನ ನೋಡಿದರೆ ಯಾರಿಗೂ ಸಹಿಸಲಾಗದೆಂದು ರೇವಣ್ಣ ಮರುಕ ವ್ಯಕ್ತಪಡಿಸಿದರು.

ಉತ್ತಮ ಶಿಕ್ಷಕರು ಹಾಗೂ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಪದಕಗಳಿಸಿದ ಶಿಕ್ಷಕರಿಗೆ ಸನ್ಮಾನಿಸಲಾಯಿತು. ಅರಕಲಗೂಡು ಶಾಸಕ ಎ.ಮಂಜು ಕಾರ್ಯಕ್ರಮಕ್ಕಾಗಮಿಸಿ ಶಿಕ್ಷಕರಿಗೆ ಶುಭಕೋರಿದರು. ಬಿಇಒ ಸೋಮಲಿಂಗೇಗೌಡ, ತಾಲ್ಲೂಕು ಪಂಚಾಯಿತಿ ಇಒ ಮುನಿರಾಜ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಂಜುನಾಥ್, ತಾಲ್ಲೂಕು ಅಧ್ಯಕ್ಷ ಮಹಲಿಂಗ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪೃಥ್ವಿರಾಜ್, ಕ್ಷೇತ್ರ ಸಮನ್ವಯಾಧಿಕಾರಿ ಕಾಳೇಗೌಡ ಹಾಗೂ ಉನ್ಯಾಸಕ ಯತೀಶ್ ಉಪಸ್ಥಿತರಿದ್ದರು.



# ಅದಾಲತ್‌ನಲ್ಲಿ ಮತ್ತೆ ಒಂದಾದ 3 ಜೋಡಿ



• ಪ್ರಜೋದಯ ವರದಿ

**ಹಾಸನ:** ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ರಾಜಿ ಸಂಧಾನದ ಮೂಲಕ ಜಿಲ್ಲೆಯ ಮೂರು ಜೋಡಿಗಳನ್ನು ಒಂದುಗೂಡಿಸುವ ಜೊತೆಗೆ 5,83,545 ಪ್ರಕರಣಗಳಲ್ಲಿ ಉಭಯ ಕಕ್ಷಿದಾರರು ಫಲಾನುಭವಿಗಳಾಗಿದ್ದಾರೆಂದು ಪ್ರಧಾನ ಜಿಲ್ಲಾ ನ್ಯಾಯಾಧೀಶರಾದ ಹೇಮಾವತಿ ಅವರು ತಿಳಿಸಿದರು.

ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, ರಾಷ್ಟ್ರೀಯ ಹಾಗು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಜಿಲ್ಲೆಯ ಒಟ್ಟು 42 ನ್ಯಾಯಾಲಯಗಳಲ್ಲಿ ಸಂಧಾನ ಪ್ರಕ್ರಿಯೆಯು ಜರುಗಿದ್ದು ಉತ್ತಮವಾದ ಫಲಿ ತಾಂಶ ಹೊರಬಿದ್ದಿದೆಂದು ಹೇಳಿದರು.

ನ್ಯಾಯಾಲಯಗಳಲ್ಲಿ ಒಟ್ಟು 94,106 ಪ್ರಕರಣಗಳು ಬಾಕಿ ಉಳಿ ದಿದ್ದು, ರಾಷ್ಟ್ರೀಯ ಲೋಕ ಅದಾಲತ್‌ಗಾಗಿ 6,045 ಪ್ರಕರಣಗಳು ಹಾಗು 5,88,784 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಗುರುತಿಸಲಾಗಿತ್ತು. ನ್ಯಾಯಾಲಯದಲ್ಲಿ ಬಾಕಿ ಉಳಿದಿದ್ದ ರಾಜಿ ಮಾಡ ಬಹು ದಾಗಿದ್ದ ಕ್ರಿಮಿನಲ್ ಪ್ರಕರಣಗಳು 106, ಚೆಕ್ ಅಮಾನ್ಯ ಪ್ರಕರಣಗಳು 170, ಬ್ಯಾಂಕ್ ವಸೂ ಲಾತಿ ಪ್ರಕರಣಗಳು 90, ವಿದ್ಯುತ್ ಕಾಯ್ದೆಯ ಪ್ರಕರ ಣಗಳು 40, ಭೂ ಸ್ವಾಧೀನದ ಪ್ರಕರಣಗಳು 50, ಮೋಟಾರು ವಾಹನ ಪರಿಹಾರದ ಪ್ರಕರಣಗಳು 60 ಇದ್ದವೆಂದು ತಿಳಿಸಿದರು.

ಕೌಟುಂಬಿಕ ಪ್ರಕರಣಗಳು 13, ಇತರೆ ಸಿವಿಲ್ ಪ್ರಕರಣಗಳು 364, ಇತರೆ ಕ್ರಿಮಿ ನಲ್ ಪ್ರಕರಣಗಳು 2,075, ಎಲ್ಲಾ ಸೇರಿ ಒಟ್ಟು 2,925 ಪ್ರಕರಣಗಳು ಮತ್ತು ವ್ಯಾಜ್ಯಪೂರ್ವ ಪ್ರಕರಣಗಳಾದ ಬ್ಯಾಂಕ್ ಸಾಲ ವಸೂಲಾತಿ ಪ್ರಕರಣಗಳು 263, ಟ್ರಾಫಿಕ್ ಚಲನ್ ಪ್ರಕರ ಣಗಳು 1,994, ಮನೆ ಕಂದಾಯದ ಪ್ರಕರಣಗಳು 4,27, 151, ನೀರಿನ ಕರ ವಸೂಲಿ ಪ್ರಕರಣ ಗಳು 1,51,212, ಸೇರಿ ಒಟ್ಟು 5,80, 620 ಪ್ರಕರಣಗಳು ಇತ್ಯರ್ಥ ಗೊಂಡು ಒಟ್ಟು 6,68,22,850 ರೂ. ಹಣ ವಸೂಲಾಗಿದೆ. ಜಿಲ್ಲಾದ್ಯಂತ ಒಟ್ಟು 5,83,545 ಪ್ರಕರಣಗಳು ಇತ್ಯರ್ಥ ಗೊಂಡಿವೆ ಎಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ ಇದ್ದರು.

## ಕೊಬ್ಬರಿ ಕಳವು

**ಚನ್ನರಾಯಪಟ್ಟಣ:** ತೆಂಗಿನ ತೋಟದ ಶೆಡ್‌ನ ಮುಂದೆ ಹಾಕಿದ್ದ 2 ಲಕ್ಷ ರೂ. ಮೌಲ್ಯದ 4,500 ಕೊಬ್ಬರಿ ಕಳವು ಮಾಡಿರುವ ಘಟನೆ ತಾಲ್ಲೂಕಿನ ಮಡಬ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಹೇಮಂತ್‌ಕುಮಾರ್ ಅವರು ಗ್ರಾಮದ ಗೇಟ್‌ನಲ್ಲಿರುವ ತಮ್ಮ ತೆಂಗಿನ ತೋಟದ ಶೆಡ್‌ನಲ್ಲಿ 7,500 ಕೊಬ್ಬರಿ ಸುಲಿಸಿ ಶೇಖರಿಸಿಟ್ಟಿದ್ದರು. ಸೆ.9ರ ರಾತ್ರಿ 4,500 ಕೊಬ್ಬರಿಯನ್ನು ಯಾರೋ ಕಳವು ಮಾಡಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



**ಆಲೂರು: ಕೊನೆಪೇಟೆ ಶ್ರೀ ವಿನಾಯಕ ಗೆಳೆಯರ ಯುವಕರ ಬಳಗ ವತಿಯಿಂದ ಪ್ರತಿಷ್ಠಾಪಿಸಲಾಗಿದ್ದ ಶ್ರೀ ಗಣಪತಿ, ಗೌರಮ್ಮ ದೇವರನ್ನು ಸಾಂಸ್ಕೃತಿಕ ಕಲಾ ತಂಡದೊಂದಿಗೆ, ಪಟ್ಟಣದಲ್ಲಿ ಮೆರವಣಿಗೆ ನಡೆಸಿ ಕಲ್ಯಾಣಿಯಲ್ಲಿ ವಿಸರ್ಜಿಸಲಾಯಿತು. ನೂರಾರು ಭಕ್ತರು ಭಾಗವಹಿಸಿದ್ದರು.**

# ವಿಶೇಷ ಚೇತನ ಮಕ್ಕಳನ್ನು ಉತ್ತೇಜಿಸಿ



• ಪ್ರಜೋದಯ ವರದಿ

**ಅರಕಲಗೂಡು:** ವಿಶೇಷ ಚೇತನ ಮಕ್ಕಳು ಸಾಮಾನ್ಯ ಮಕ್ಕಳರಂತೆಯೇ ವಿದ್ಯೆ ಸೇರಿದಂತೆ ಇತರೆ ಕ್ಷೇತ್ರದಲ್ಲಿ ಸಾಧನೆ ಮಾಡಲು ವಿಪುಲ ಅವಕಾಶಗಳಿದ್ದು, ಪೋಷಕರು ಈ ನಿಟ್ಟಿನಲ್ಲಿ ತಮ್ಮ ಮಕ್ಕಳಿಗೆ ಉತ್ತೇಜಿಸಬೇಕೆಂದು ಶಾಸಕ ಎ.ಮಂಜು ತಿಳಿಸಿದರು.

ಪಟ್ಟಣದ ಪಿಎಂ ಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಶನಿವಾರ ಅಲಿಂಕೋ ಬೆಂಗಳೂರು ಮತ್ತು ಶಾಲಾ ಶಿಕ್ಷಣ ಇಲಾಖೆ ವತಿಯಿಂದ ವಿಶೇಷ ಚೇತನ ಮಕ್ಕಳಿಗೆ ಸಾಧನ ಸಲಕರಣೆಗಳನ್ನು ವಿತರಣೆ ಮಾಡಿ ಮಾತನಾಡಿದ ಅವರು, 2024-25 ಸಾಲಿನ ನಡೆಸಿದ ವೈದ್ಯಕೀಯ ತಪಾಸಣೆಯಲ್ಲಿ 65 ಮಕ್ಕಳು ಭಾಗವಹಿಸಿದ್ದು, ಈ ಪೈಕಿ ವೈದ್ಯರು ನೀಡಿದ ಪ್ರಮಾಣ ಪತ್ರದಂತೆ ಇಂದು 45 ವಿಶೇಷಚೇತನ ಮಕ್ಕಳಿಗೆ ಸಾಧನ ಸಲಕರಣೆಗಳನ್ನು ವಿತರಿಸಲಾಗುತ್ತಿದೆ. ಇದರಿಂದ ವಿಶೇಷ ಚೇತನ ಮಕ್ಕಳ ಓದಿಗೆ ಅನುಕೂಲವಾಗಲಿದೆ. ಸರ್ಕಾರದ ಈ ಯೋಜನೆ ಶ್ಲಾಘನೀಯವಾಗಿದೆ. ಪೋಷಕರು ಈ ಸೌಲಭ್ಯವನ್ನು ಉಪಯೋಗಿಸಿಕೊಂಡು ಮಕ್ಕಳ ಭವಿಷ್ಯ ರೂಪಿಸಬೇಕು ಎಂದು ಸಲಹೆ ಮಾಡಿದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ನಾರಾಯಣ್, ಬಿಆರ್‌ಸಿ ಬಾಲ್‌ರಾಜ್, ಟಿಪಿಒ ನಿಂಗಯ್ಯ, ಶಾಲಾ ಶಿಕ್ಷಕರು,ವಿಶೇಷ ಚೇತನ ಮಕ್ಕಳ ಪೋಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸಾಮಾಜಿಕ ಪ್ರಗತಿಗೆ ಶಿಕ್ಷಣ ಪೂರಕ

• ಪ್ರಜೋದಯ ವರದಿ

**ಹೊಳೆನರಸೀಪುರ:** ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುವುದರಿಂದ ಉತ್ತಮ ಭವಿಷ್ಯ ಕಟ್ಟಿಕೊಳ್ಳಬೇಕೆಂದು ಜನಪ್ರಿಯ ಆಸ್ಪತ್ರೆಯ ಡಾ.ಅಬ್ದುಲ್ ಬಶೀರ್ ಅವರು ಸಲಹೆ ನೀಡಿದರು.

ಪಟ್ಟಣದ ಜೆ.ಎಂ.ಶಾದಿಮಹಲ್‌ನಲ್ಲಿ ಎಪಿಜೆ ಅಬ್ದುಲ್‌ಕಲಾಂ ಮುಸ್ಲಿಂ ನೌಕರರ ಸಂಘ ಆಯೋಜಿಸಲಾಗಿದ್ದ ಪ್ರತಿಭಾ ಪುರಸ್ಕಾರದಲ್ಲಿ ಮಾತನಾಡಿದ ಅವರು, ಸಮುದಾಯ ಮುಖ್ಯವಾಹಿನಿಗೆ ಬರಲು ಶಿಕ್ಷಣದ ಪಾತ್ರ ಅಗತ್ಯ. ಪೋಷಕರು ಮಕ್ಕಳನ್ನು ಸುಶೀಕ್ಷಿತರಾಗಿ ಮಾಡುವ ಮೂಲಕ ಸಾಮಾಜಿಕ ಪ್ರಗತಿಗೆ ಪೂರಕವಾಗಬೇಕು. ಅಕ್ಷರ ಕಲಿಯದವರ ಸಂಖ್ಯೆ ಇಳಿಮುಖವಾಗಿದೆ. ಉನ್ನತ ಶಿಕ್ಷಣ ಹೊಂದುವರೂ ಹೆಚ್ಚಾದಲ್ಲಿ ಒಳಿತಾಗಲಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಹೆಚ್.ಎಲ್.ಮಲ್ಲೇಶಗೌಡ ಅವರು ಮಾತನಾಡಿ, ಸಮಾಜದಲ್ಲಿ ಕೆಳ ಹಂತದ ಸಮೂದಾಯದವರು ಪ್ರಗತಿ ಪಥದತ್ತ ಸಾಗಬೇಕು. ಆಗ ಮಾತ್ರ ಸಮಾಜದಲ್ಲಿ ಸಮಾನ ಅವಕಾಶ ಪಡೆಯಲು ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಪ್ರತಿಭಾ ವಂತರನ್ನು ಪ್ರೋತ್ಸಾ ಹಿಸುವ ಕಾರ್ಯ ಸ್ವಾಗತಾರ್ಹ ಎಂದರು.

ತಹಶೀಲ್ದಾರ್ ವೈ.ಎಂ.ರೇಣುಕುಮಾರ್, ಎಪಿಜೆ ಅಬ್ದುಲ್‌ಕಲಾಂ, ಮುಸ್ಲಿಂ ನೌಕರರ ಸಂಘದ ಅಧ್ಯಕ್ಷ ಸೈಯದ್ ಖಾದ್ರಿ, ಉಪ ಖಜಾನೆ ಅಧಿಕಾರಿ ಜಾಫರ್‌ಶರೀಫ್, ಹಾಸನ ಟಿವಿ ವ್ಯವಸ್ಥಾಪಕ ನಿರ್ದೇಶಕ ತೌಫಿಕ್ ಅಹಮದ್, ಉಪನ್ಯಾಸಕ ಫಯಾಜ್ ಪಾಷ ಉಪಸ್ಥಿತರಿದ್ದರು.



# ಶಿಕ್ಷಣ-ಸಂಸ್ಕಾರ ಒಂದೇ ನಾಣ್ಯದ ಎರಡು ಮುಖಗಳು



• ಪ್ರಜೋದಯ ವರದಿ

**ಜಾವಗಲ್:** ಶಿಕ್ಷಣ ಮತ್ತು ಸಂಸ್ಕಾರ ಒಂದೇ ನಾಣ್ಯದ ಎರಡು ಮುಖಗಳಾಗಿದ್ದು, ವಿದ್ಯಾರ್ಥಿಗಳು ಉತ್ತಮ ಸಂಸ್ಕಾರ ಅಳವಡಿಸಿಕೊಳ್ಳಬೇಕೆಂದು ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಡಿ.ಪರಮೇಶ್ ಅವರು ತಿಳಿಸಿದರು.

ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ನಡೆದ ಶೈಕ್ಷಣಿಕ ವರ್ಷದ ಸಹಪಠ್ಯ ಚಟುವಟಿಕೆಗಳ ಉದ್ಘಾಟನೆ ಮತ್ತು ಪ್ರಥಮ ಪದವಿ ವಿದ್ಯಾರ್ಥಿಗಳ ಸ್ವಾಗತ ಸಮಾ ರಂಭದಲ್ಲಿ ಮಾತನಾಡಿದ ಅವರು, ಶಿಕ್ಷಣ ಎಂದರೆ ಪುಸ್ತಕಗಳ ಅಧ್ಯಯನಕ್ಕೆ ಮಾತ್ರ ಸೀಮಿತ ವಾಗಿರದೆ ಅದು ಜನಪದ ಕಲೆ, ಸಾಹಿತ್ಯ, ಕಥೆ, ಕಾದಂಬರಿ ಹೀಗೆ ಮೊದಲಾದ ಸಾಂಸ್ಕೃತಿಕ ಚಟುವಟಿಕೆಗಳನ್ನು ಒಳಗೊಂಡಿದ್ದು, ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಆಸಕ್ತಿ ಬೆಳೆಸಿಕೊಳ್ಳಬೇಕೆಎಂದು ಸಲಹೆ ನೀಡಿದರು.

ಪ್ರಾಂಶುಪಾಲ ಉಮೇಶ್ ಹೊಸಹಳ್ಳಿ ಅವರು ಮಾತನಾಡಿ, ವಿದ್ಯಾರ್ಥಿಗಳು ಶಾಲಾ, ಕಾಲೇಜುಗಳಲ್ಲಿ ದೊರೆಯುವ ಅವಕಾಶಗಳನ್ನು ಉತ್ತಮ ರೀತಿಯಲ್ಲಿ ಬಳಸಿಕೊಂಡು ಎಲ್ಲರಿ ಗಿಂತ ಭಿನ್ನವಾಗಿ ಗುರುತಿಸಿಕೊಳ್ಳಬೇಕು ಎಂದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಮೋಹನ್ ಕುಮಾರ್, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ಜಗನ್ನಾಥ್, ರಾಜಶೇಖರಪ್ಪ, ಶಿವಶಂಕರ್, ಸತ್ಯನಾರಾಯಣ್, ಶಿವಕುಮಾರ್, ವಿಟಿಎಸ್ ನಾಗರಾಜ್, ಲೋಕೇಶ್, ಕುಸುಮಾ, ಪಾಪಣ್ಣ, ಉಪನ್ಯಾಸಕರಾದ ಮಹೇಶ್, ವಂದನಾ, ಮಂಜುನಾಥ್, ಶಿವರಾಜ್, ಚಿತ್ರಲೇಖಾ ಉಪಸ್ಥಿತರಿದ್ದರು.

## ಬೈಕ್ ಅಪಘಾತ: ಸವಾರ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ರಸ್ತೆಗೆ ಅಡ್ಡಲಾಗಿ ಬಂದ ನಾಯಿಗೆ ಡಿಕ್ಕಿಯಾಗುವುದನ್ನು ತಪ್ಪಿಸಲು ಜೋರಾಗಿ ಬ್ರೇಕ್ ಹಾಕಿದ ಬೈಕ್ ಸವಾರ ಕೆಳಗೆ ಬಿದ್ದು ಮೃತಪಟ್ಟಿರುವ ಘಟನೆ ತಾಲ್ಲೂಕಿನ ಹಿರೀ ಸಾವೆಯ ಅಮ್ಮ ಕುಟೀರ ಹೋಟೆಲ್ ಸಮೀಪ ಶನಿವಾರ ನಡೆದಿದೆ.

ನಾಗಮಂಗಲ ತಾಲ್ಲೂಕು ಎಂ.ಕೋಡಿಹಳ್ಳಿ ಗ್ರಾಮದ ಹನುಮಂತೇಗೌಡ (46) ಮೃತರು. ಸಂಬಂಧಿ ಶಾಂತಕುಮಾರ ಅವರೊಂದಿಗೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ಏಕಾಏಕಿ ನಾಯಿ ಅಡ್ಡ ಬಂದಿದೆ. ಜೋರಾಗಿ ಬ್ರೇಕ್ ಹಾಕಿದ ಪರಿಣಾಮ ಇಬ್ಬರೂ ಕೆಳಗೆ ಬಿದ್ದಿದ್ದಾರೆ. ಗಂಭೀರ ಗಾಯ ಗೊಂಡಿದ್ದ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತೀವ್ರ ರಕ್ತಸ್ರಾವ ಹಾಗು ಗಾಯದಿಂದಾಗಿ ಹನುಮಂತೇಗೌಡ ಮೃತಪಟ್ಟಿದ್ದಾರೆ. ಶಾಂತಕುಮಾರ ಅವರಿಗೆ ಚಿಕಿತ್ಸೆ ಮುಂದುವರೆದಿದೆ.

## ಮೃತರ ಕುಟುಂಬಕ್ಕೆ ತಲಾ 1 ಲ.ರೂ. ಪರಿಹಾರ

» ಮೊದಲನೇ ಪುಟದಿಂದ

ಅವರು ಏನೂ ಹೇಳಿರಲಿಲ್ಲ. ಈಗ ಎಲ್ಲರೂ ಸೇರಿ ಒಮ್ಮತದ ತೀರ್ಮಾನಕ್ಕೆ ಬಂದು ಮೃತ ಕುಟುಂಬಕ್ಕೆ ತಲಾ 1 ಲಕ್ಷ ರೂ., ಗಂಭೀರ ಗಾಯಾಳುಗಳಿಗೆ 25 ಸಾವಿರ ರೂ., ಮಧ್ಯಮ ಗಾಯಾಳುಗಳಿಗೆ 20 ಸಾವಿರ ರೂ. ಹಾಗು ಸಣ್ಣಪುಟ್ಟ ನೋವಿನಿಂದ ಬಳಲುತ್ತಿರುವ ವರಿಗೆ 15 ಸಾವಿರ ರೂ. ನೀಡಲಾಗುವುದೆಂದು ತಿಳಿಸಿದರು.

ಮೃತರ ಕುಟುಂಬದವರ ಮಾಹಿತಿಯನ್ನು ಜಿಲ್ಲಾ ಧಿಕಾರಿ ನಮಗೆ ನೀಡಿದರೆ ಹಣ ತಲು ಪಿಸುತ್ತೇವೆ. ಜಿಲ್ಲಾಡಳಿತವೇ ತಲುಪಿಸುವುದಾದರೆ ಅವರಿಗೆ ಹಣ ನೀಡಲು ಸಿದ್ಧರಿದ್ದೇವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಲಾ 5 ಲಕ್ಷ ರೂ., ಪ್ರಧಾನಿ ನರೇಂದ್ರ ಮೋದಿ ಅವರು 2 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ. ರಾಜ್ಯ ಸರ್ಕಾರ ಪರಿಹಾರ ಮೊತ್ತ ಹೆಚ್ಚಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ರಸ್ತೆ ಅಪಘಾತಕ್ಕೆ ಪರಿಹಾರ ನಿಗದಿಪಡಿಸಲು ಕಾನೂನು ಇದೆ. ಅದನ್ನು ಮೀರಿ ಏನೂ ಮಾಡಲು ಸಾಧ್ಯವಿಲ್ಲವೆಂದರು.

ಶಾಸಕ ಹೆಚ್.ಪಿ.ಸ್ವರೂಪ್, ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್, ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಹೊನ್ನವಳ್ಳಿ ಸತೀಶ್, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಸ್ವಾಮಿಗೌಡ ಇದ್ದರು.

# ಅನ್ನದಾತರಿಗೆ ಸಹಕಾರ ಬ್ಯಾಂಕ್ ಜೀವನಾಧಾರ: ಕೆ.ಎಂ.ಶಿ.

## ಅರಸೀಕೆರೆ ಅರ್ಬನ್ ಬ್ಯಾಂಕ್ ಸುವರ್ಣ ಮಹೋತ್ಸವ | ಹಿರಿಯ ಅಧ್ಯಕ್ಷರಿಗೆ ಸನ್ಮಾನ

• ಪ್ರಜೋದಯ ವರದಿ

**ಅರಸೀಕೆರೆ:** ಸಹಕಾರ ಬ್ಯಾಂಕ್‌ಗಳು ಬಡ ಹಾಗು ಮಧ್ಯಮ ವರ್ಗದ ಅನ್ನದಾತರ ಜೀವನಾಧಾರ ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಹೇಳಿದರು.

ನಗರದ ಶ್ರೀ ಗುರುಸಿದ್ಧರಾಮೇಶ್ವರ ಸಮುದಾಯ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ದಿ ಅರಸೀಕೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್‌ನ ಬೆಳ್ಳಿ ಹಬ್ಬ, ಸುವರ್ಣ ಮಹೋತ್ಸವ ಹಾಗು ಸರ್ವ ಸದಸ್ಯರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಅನ್ನದಾತರು, ಜನಸಾಮಾನ್ಯರ ಹಿತ ಮನಗಂಡು ಕೃಷಿ ಮತ್ತು ಉದ್ಯೋಗ ಉತ್ತೇಜಿಸಲು ಶತಮಾನದ ಹಿಂದೆ ಸಹಕಾರ ಸಂಘದ ಸ್ಥಾಪನೆಯಾಗಿತ್ತು. ಬದಲಾದ ಕಾಲಘಟ್ಟದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಸೆಡ್ಡು ಹೊಡೆಯುವ ರೀತಿಯಲ್ಲಿ ಸಂಘಗಳು ಕೆಲಸ ಮಾಡುತ್ತಿವೆ ಎನ್ನುವುದಕ್ಕೆ ಬೆಳಗಾವಿ ಜಿಲ್ಲೆ ಸಹಕಾರಿ ಬ್ಯಾಂಕ್ ತಾಜಾ ಉದಾಹರಣೆಯಾಗಿದೆ. ಬಡ್ಡಿ ಸರಳೀಕರಣ, ಬಲವಂತದ ವಸೂಲಾತಿ ಕ್ರಮಗಳು ಕಡಿಮೆಯಾಗುತ್ತಿರುವ ಆರ್ಥಿಕ ಚಟುವಟಿಕೆಗಳು




ಚೈತನ್ಯ ಪಡೆದುಕೊಳ್ಳುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಕೇಂದ್ರ ಹಾಗು ರಾಜ್ಯ ಸರ್ಕಾರ ಇನ್ನಷ್ಟು ನೆರವು ನೀಡುವ ಮೂಲಕ ಬಡ ಹಾಗ ಮಧ್ಯಮ ವರ್ಗದ ಜನರ ಜೀವನಾಡಿಯಾಗಿರುವ ಸಹಕಾರ ಬ್ಯಾಂಕ್‌ಗಳ ಸಬಲೀಕರಣಕ್ಕೆ ಶಕ್ತಿ ತುಂಬಬೇಕು. ಹಿರಿಯರ ಪರಿಶ್ರಮದಿಂದ ಕಳೆದ 62 ವರ್ಷಗಳ ಹಿಂದೆ ಅರಸೀಕೆರೆ ನಗರದಲ್ಲಿ ಆರಂಭಗೊಂಡಿರುವ ದಿ ಅರಸೀಕೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಸೇವಾ ಕ್ಷೇತ್ರದಲ್ಲಿ ತನ್ನದೇ ಛಾಪು ಮೂಡಿಸಿದ್ದು, ಇನ್ನಷ್ಟು ಪ್ರಗತಿ ಸಾಧಿಸಲಿ ಎಂದರು.

ಸಹಕಾರ ಸಂಘಗಳು ರೈತರಿಗೆ ವರದಾನವಾಗಿವೆ. ಕಡಿಮೆ ಬಡ್ಡಿ ದರದಲ್ಲಿ ಸಾಲ ಸಿಗುವುದರಿಂದ ಹಾಗು ಹತ್ತಿರದಲ್ಲೇ ಬ್ಯಾಂಕ್ ಇರುವುದರಿಂದ ರೈತರಿಗೆ ಅನುಕೂಲವಾಗುತ್ತದೆ. ಈ ಕಾರಣದಿಂದಲೇ ವರ್ಷದಿಂದ ವರ್ಷಕ್ಕೆ ಸಹಕಾರ ಸಂಘಗಳ ಬಗ್ಗೆ ಸದಾಭಿಪ್ರಾಯ ಮೂಡುತ್ತಿದೆ ಎಂದರು.

ಬ್ಯಾಂಕ್ ಅಧ್ಯಕ್ಷ ಕೆ.ರಮೇಶ್ ಅವರು ಮಾತನಾಡಿ, ದಿ ಅರಸೀಕೆರೆ ಅರ್ಬನ್ ಕೋ-ಆಪರೇಟೀವ್ ಬ್ಯಾಂಕ್ ನಗರ ನಿವಾಸಿಗಳ ಗ್ರಾಹಕ ಸ್ನೇಹಿ ಸಹಕಾರ ಬ್ಯಾಂಕ್ ಎಂದೇ ಸಾರ್ವಜನಿಕ ವಲಯದಲ್ಲಿ ಗುರುತಿಸಿಕೊಂಡಿದೆ. ಸುದೀರ್ಘ ಸೇವೆ ಮನಗಂಡು ಬೆಳ್ಳಿ ಹಬ್ಬ ಹಾಗು ಸುವರ್ಣ ಮಹೋತ್ಸವ ಹಮ್ಮಿಕೊಳ್ಳಲಾಗಿದೆ. ಜನ ಸ್ನೇಹಿ ಸಹಕಾರ ಬ್ಯಾಂಕ್‌ನ ಕೀರ್ತಿಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ದಿಸೆಯಲ್ಲಿ ಶ್ರಮಿಸಲಾಗುತ್ತಿದೆ.

**361 ಕೋ. ರೂ. ವಹಿವಾಟು**

ಸಹಕಾರ ಬ್ಯಾಂಕ್ ವಾರ್ಷಿಕ 361.82 ಕೋ.ರೂ.ಗಳಷ್ಟು ವಹಿವಾಟು ನಡೆಸುತ್ತಿದೆ. ಅದರಲ್ಲಿ 5317 ಷೇರು ಖಾತೆದಾರರು, ನಿಶ್ಚಿತ ಠೇವಣಿ, ಪಿಗ್ಮಿ, ಉಳಿತಾಯ ಖಾತೆ, ಆರ್.ಡಿ (ರೆಕರಿಂಗ್ ಡೆಪಾಸಿಟ್)ಸೇರಿ ಇತರೆ 10,315 ಸಾವಿರ ಇತರೆ ಖಾತೆದಾರರನ್ನು ಹೊಂದಿರುವ ಹೆಗ್ಗಳಿಕೆಗೆ ಬ್ಯಾಂಕ್ ಪಾತ್ರವಾಗಿದೆ ಎಂದರು.

ನಗರಸಭೆ ಅಧ್ಯಕ್ಷ ಎಂ. ಸಮೀವುಲ್ಲಾ ಅವರು ಮಾತನಾಡಿ, ಗೃಹ ನಿರ್ಮಾಣ ಸಾಲದ ಬಡ್ಡಿ ದರ ಕಡಿಮೆ ಮಾಡಿದರೆ ಜನರಿಗೆ ಅನುಕೂಲವಾಗಲಿದೆ. ದಿ ಅರಸೀಕೆರೆ ಅರ್ಬನ್ ಕೋ-ಆಪರೇಟೀವ್ ಬ್ಯಾಂಕ್ ಸ್ಥಾಪನೆ ಮಾಡಿದ ಹಿರಿಯರನ್ನು ಸ್ಮರಿಸಿದರು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಬಿ.ಎಸ್.ಅರುಣ್ ಕುಮಾರ್ ಅವರು ಮಾತನಾಡಿ, ದಶಕಗಳ ಹಿಂದೆ ಸಣ್ಣ ಪ್ರಮಾಣದಲ್ಲಿ ಆರಂಭವಾಗಿದ್ದ ಸಹಕಾರ ಬ್ಯಾಂಕ್ ವಾರ್ಷಿಕ ಆರು ಕೋಟಿ ರೂ. ಲಾಭದತ್ತ ದಾಪುಗಾಲಿಟ್ಟಿರುವುದು ಶ್ಲಾಘನೀಯ. ಎಲ್ಲಾ ವರ್ಗ, ಸಮುದಾಯದ ಜನರನ್ನು ಹೊಂದಿರುವ ಏಕೈಕ ಬ್ಯಾಂಕ್ ಎಂದು ಬಣ್ಣಿಸಿದರು.

ಬ್ಯಾಂಕ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಹಿರಿಯರನ್ನು ಸನ್ಮಾನಿಸಲಾಯಿತು. ಬ್ಯಾಂಕ್ ವತಿಯಿಂದ ನೂತನ ಡೆಬಿಟ್ ಕಾರ್ಡ್ ಅನ್ನು ವೇದಿಕೆಯಲ್ಲಿದ್ದ ಗಣ್ಯರು ಬಿಡುಗಡೆ ಮಾಡಿದರು. ಉಪಾಧ್ಯಕ್ಷ ಕೀರ್ತಿ, ನಿರ್ದೇಕರಾದ ಪ್ರಸನ್ನಕುಮಾರ್, ಚಂದ್ರಯ್ಯ, ಮಂಜುನಾಥ್, ಚಿಕ್ಕಣ್ಣ, ಅಬ್ದುಲ್ ಜಮೀಲ್, ಮಹಾಲಿಂಗಸ್ವಾಮಿ, ಜಗದಾಂಬ, ಲಾವಣ್ಯ, ಗೀಜಿಹಳ್ಳಿ ರವಿ, ವಿಜಯಕುಮಾರ್, ಚಂದ್ರಶೇಖರಪ್ಪ, ಕುಮಾರ್ ಹಾಗು ವ್ಯವಸ್ಥಾಪಕ ರುದ್ರಮುನಿಸ್ವಾಮಿ, ಚಂದ್ರು ಮುಂತಾದವರು ಉಪಸ್ಥಿತರಿದ್ದರು.

## ಪಾಕ್ ವಿರುದ್ಧ ಭಾರತಕ್ಕೆ ಸಾಧಾರಣ ಮೊತ್ತ



**ದುಬೈ:** ಏಷ್ಯಾಕಪ್ ಟ್ವೆಂಟಿ-20 ಕ್ರಿಕೆಟ್ ಟೂರ್ನಿಯ ಇಂದಿನ ಪಂದ್ಯದಲ್ಲಿ ಭಾರತದ ವಿರುದ್ಧ ಪಾಕಿಸ್ತಾನ ಸಾಧಾರಣ ಮೊತ್ತ ಪೇರಿಸಿದೆ. ದುಬೈ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾ ಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ವಿರುದ್ಧ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಪಾಕ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 127 ರನ್ ಗಳಿಸಿದೆ.

ಪಾಕ್ ಪರ ಆರಂಭಿಕ ಆಟಗಾರ ಸಾಹಿಬ್ ಝಾದಾ ಫರ್ಹಾನ್ 40, ಶಾಹಿನ್ ಅಫ್ರೀದಿ ಔಟಾಗದೆ 33 ರನ್ ಗಳಿಸಿ ಗಮನ ಸೆಳೆದಿದ್ದಾರೆ. ಫಖರ್ ಜಮಾನ್ 17 ಫಾಹೀಮ್ ಅಶ್ರಫ್ 11, ಸೂಫಿಯಾನ್ ಮುಖೀಮ್ 10 ರನ್ ಗಳಿಸಿದರೆ, ಇತ್ತ ನಾಯಕ ಸಲ್ಮಾನ್ ಆಘಾ 03, ಮೊಹಮ್ಮದ್ ಹ್ಯಾರಿಸ್ 03, ಹಸನ್ ನವಾಜ್ 05, ಸಯಿಮ್ ಅಯೂಬ್ ಹಾಗೂ ಮೊಹಮ್ಮದ್ ನವಾಜ್ ರನ್ ಖಾತೆ ತೆರೆಯದೆ ಪೆವಿಲಿಯನ್ ಸೇರಿಕೊಂಡಿದ್ದಾರೆ. ಭಾರತದ ಪರ ಕುಲದೀಪ್ ಯಾದವ್ 3, ಬೂಮ್ರಾ ಮತ್ತು ಅಕ್ಷರ್ ತಲಾ 2ವಿಕೆಟ್ ಪಡೆದರು.

# ಸಮಾಜಕ್ಕೆ ವೈದ್ಯಕೀಯ ಕ್ಷೇತ್ರದ ಅವಶ್ಯಕತೆ ಹೆಚ್ಚಿದೆ

» ಮೊದಲನೇ ಪುಟದಿಂದ

ಉತ್ತರ ಕರ್ನಾಟಕದಲ್ಲಿ ಸಿದ್ದು ನ್ಯಾಮಗೌಡ ಅವರ ನೇತೃತ್ವದಲ್ಲಿ ರೈತರಿಂದಲೇ ನಿರ್ಮಾಣಗೊಂಡ ಬ್ಯಾರೇಜ್ ಇಡೀ ದೇಶದಲ್ಲೇ ಮನ್ನಣೆ ಪಡೆದ ಮಾದರಿ ಬ್ಯಾರೇಜನ್ನು ಕರ್ಮಯೋಗಿ ಚಾರುಕೀರ್ತಿ ಶ್ರೀಗಳವರು ಅಡಿಗಲ್ಲು ಹಾಕಿ ಚಾಲನೆ ನೀಡಿದ್ದನ್ನು ಅವರು ಸ್ಮರಿಸಿದರು.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತನಾಡಿ, ಇಡೀ ದೇಶದಲ್ಲಿ ಸ್ವಾರ್ಥ ರಹಿತ ಧಾರ್ಮಿಕ ಕ್ಷೇತ್ರ ಇದ್ದರೆ ಅದು ತ್ಯಾಗ, ಅಹಿಂಸೆಯನ್ನು ಪ್ರಪಂಚಕ್ಕೆ ಸಾರಿದ ಭಗವಾನ್ ಬಾಹುಬಲಿ ಸ್ವಾಮಿಯ ಪುಣ್ಯಕ್ಷೇತ್ರ ಶ್ರವಣಬೆಳಗೊಳ. ಅಳಿವಿನಂಚಿನಲ್ಲಿದ್ದ ಪ್ರಾಕೃತ ಭಾಷೆಯನ್ನು ಪುನರುಜ್ಜೀವನ ಗೊಳಿಸಲು ಕರ್ಮಯೋಗಿ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಐದು ದಶಕಗಳ ಕಾಲ ಶ್ರಮಿಸಿದರು. ಮಕ್ಕಳ ಆಸ್ಪತ್ರೆಯನ್ನು ತೆರೆದು ಗ್ರಾಮೀಣ ಭಾಗದ ಬಡ ಕುಟುಂಬಗಳಿಗೆ ಆಶಾಕಿರಣವಾದವರು. ಒಂದನೇ ತರಗತಿಯಿಂದ ಇಂಜಿನೀಯರಿಂಗ್ ಪದವಿ ವರೆಗೆ ಶಿಕ್ಷಣ ಸಂಸ್ಥೆಗಳನ್ನು ತೆಗೆದು ಗ್ರಾಮೀಣ ಭಾಗದಲ್ಲೂ ಗುಣ ಮಟ್ಟದ ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಹಿರಿಯ ಶ್ರೀಗಳು ಕ್ಷೇತ್ರದ ಅಭಿವೃದ್ಧಿಗೆ ಅಡಿಗಲ್ಲು ಹಾಕಿದ್ದರೆ, ಇಂದಿನ ಅಭಿನವ ಚಾರುಶ್ರೀ ಅದಕ್ಕೆ ಆಧುನಿಕ ಸ್ಪರ್ಶ ಸ್ಪರ್ಶ ನೀಡಿ ಉನ್ನತೀಕರಣ ಗೊಳಿಸುತ್ತಿದ್ದಾರೆ. ಕ್ಷೇತ್ರಕ್ಕೆ ಹಿಂದೆ ಸಚಿವರಾಗಿದ್ದ ಹೆಚ್.ಸಿ. ಶ್ರೀಕಂಠಯ್ಯ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಹೆಚ್.ಡಿ. ರೇವಣ್ಣ ಅವರು ತಮ್ಮದೇಯಾದ ಕೊಡುಗೆ ನೀಡಿದ್ದು, ಯುಜಿಡಿ, ನದಿಯಿಂದ ಕುಡಿಯುವ ನೀರಿನ ಸಂಪರ್ಕ, ವಸತಿ ಗೃಹ ನಿರ್ಮಾಣ ಸೇರಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿದ್ದಾರೆ. ಅದೇ ದಾರಿಯಲ್ಲಿ ನಾವು ಕೂಡ ಶ್ರೀಗಳ ಮಾರ್ಗದರ್ಶನದಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದೇವೆ ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಮಾತನಾಡಿದರು. ಶ್ರವಣಬೆಳಗೊಳ ಗ್ರಾಮ ಪಂಚಾಯಿತಿ ಅಧ್ಯಕ್ಷ ಅಫ್ತಾಬ್ ಪಾಷಾ, ಪ್ಯಾರಾ ಮೆಡಿಕಲ್ ಬೋರ್ಡ್ ವಿಶೇಷ ಅಧಿಕಾರಿ ಡಾ|| ಕೆ.ಆರ್. ವಿಜಯಕುಮಾರ್, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ನರ್ಸಿಂಗ್ ವಿಭಾಗದ ಸಹಾಯಕ ನಿರ್ದೇಶಕ ಶ್ರೀಕಾಂತ್ ಫುಲಾರೆ, ರಾಜ್ಯ ಶುಶ್ರೂಷ ಪರೀಕ್ಷಾ ಮಂಡಳಿ ಮೇಲ್ವಿಚಾರಕ ಎಂ.ಎಸ್.ಶರತ್ ಬಾಬು, ಬಾಹುಬಲಿ ಶಿಕ್ಷಣ ಸಂಸ್ಥೆ ಕಾರ್ಯಾಧ್ಯಕ್ಷ ಎ.ಸಿ. ಪಾಟೀಲ್, ಕಾರ್ಯದರ್ಶಿ ಬಬನ್ ಪಿ. ದತವಾಡೆ, ಆಡಳಿತ ವೈದ್ಯಾಧಿಕಾರಿ ಡಾ||ಬಿ.ಆರ್.ಯುವರಾಜ್, ಡಾ||ಅರುಣ್ ಕುಮಾರ್, ಪ್ರಾಂಶುಪಾಲರಾದ ಡಾ|| ಪೂರ್ಣಿಮಾ, ಪವಿತ್ರ ಮುಂತಾದವರಿದ್ದರು.

# ಮೊಸಳೆಹೊಸಳ್ಳಿಯಲ್ಲಿ ಹಲವೆಡೆ ರಸ್ತೆ ಉಬ್ಬು ವ್ಯವಸ್ಥೆ

• ಪ್ರಜೋದಯ ವರದಿ

**ಹಾಸನ:** ಕ್ಯಾಂಟರ್ ಡಿಕ್ಕಿಯಾಗಿ ತಾಲ್ಲೂಕಿನ ಮೊಸಳೆಹೊಸಳ್ಳಿಯಲ್ಲಿ 10 ಜನರು ಮೃತಪಟ್ಟ ಬಳಿಕ ಎಚ್ಚೆತ್ತುಕೊಂಡಿರುವ ಅಧಿಕಾರಿಗಳು ಅಪಾಯಕಾರಿ ಸ್ಥಳಗಳಲ್ಲಿ ರಸ್ತೆ ಉಬ್ಬು (ಹಂಪ್ಸ್) ನಿರ್ಮಿಸಿದ್ದಾರೆ.

ಶನಿವಾರ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರಿಗೆ ಸ್ಥಳೀಯರು ಈ ಕುರಿತು ಮನವಿ ಸಲ್ಲಿಸಿದ್ದರು. ಗ್ರಾಮ ಆರಂಭ ಹಾಗು ವ್ಯಾಪ್ತಿ ಮುಗಿಯುವ ರಸ್ತೆಯ ಅಲ್ಲಲ್ಲಿ ಹಂಪ್ಸ್ ನಿರ್ಮಿಸಿದರೆ ವಾಹನ ಸವಾರರು ನಿಧಾನವಾಗಿ ಬರುತ್ತಾರೆ. ರಾಜ್ಯ ಹೆದ್ದಾರಿ ಆಗಿದ್ದ ಸಂದರ್ಭದಲ್ಲಿ ಹಂಪ್ಸ್‌ಗಳಿದ್ದವು. ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿದ ಬಳಿಕ ರಸ್ತೆ ಉಬ್ಬುಗಳನ್ನು ತೆಗೆದು ಹಾಕಲಾಗಿದೆ. ಇಲ್ಲಿ ಹಂಪ್ಸ್ ಹಾಕಿಸಬೇಕೆಂದು



ಕೋರಿದ್ದರು.

ಸಚಿವರ ಸೂಚನೆ ಮೇರೆಗೆ ಶನಿವಾರ ಲೋಕೋಪಯೋಗಿ ಇಲಾಖೆ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಪರಿಶೀಲನೆ ನಡೆಸಿ, ಭಾನುವಾರ ಬೆಳಿಗ್ಗೆ 20ಕ್ಕೂ ಹೆಚ್ಚು ಕಾರ್ಮಿಕರ ನೆರವಿನಿಂದ ರಸ್ತೆಯ ಎರಡೂ ಬದಿಗೆ ಹಂಪ್ಸ್ ಅಳವಡಿಸಲಾಗಿದೆ.

ಚಾಲಕ ಭುವನೇಶ್ ಬೆಂಗಳೂರಿಗೆ ಗಣೇಶ ಮೆರವಣಿಗೆಯಲ್ಲಿ ಸಾಗುತ್ತಿದ್ದ ಯುವಕರ ಮೇಲೆ ಕ್ಯಾಂಟರ್ ಹತ್ತಿಸಿದ್ದ ಚಾಲಕ ಭುವನೇಶ್‌ನನ್ನು ಬೆಂಗಳೂರಿನ ಜಯದೇವ ಆಸ್ಪತ್ರೆಗೆ ರವಾನಿಸಲಾಗಿದೆ. ಘಟನೆಯಲ್ಲಿ ಆತನಿಗೂ ಗಾಯಗಳಾಗಿದ್ದರಿಂದ ಬಿಜಿಎಸ್ ಆಸ್ಪತ್ರೆಗೆ ದಾಖಲಾಗಿದ್ದ.

ದುರಂತದ ಪ್ರಮುಖ ಆರೋಪಿಯಾಗಿಸಿ ಭುವನೇಶ್ ವಿರುದ್ಧ ಎಫ್ ಐಆರ್ ದಾಖಲಾಗಿದೆ. ಭಾನುವಾರ ಬೆಳಿಗ್ಗೆ ಆತನನ್ನು ವಿಚಾರಣೆಗಾಗಿ ವಶಕ್ಕೆ ಪಡೆಯಲು ಗೊರೂರು ಠಾಣೆ ಪೊಲೀಸರು ಬಿಜಿಎಸ್ ಆಸ್ಪತ್ರೆಯಿಂದ ಕರೆದುಕೊಂಡು ಬಂದಿದ್ದರು. ವೈದ್ಯಕೀಯ ಪರೀಕ್ಷೆಗಾಗಿ ಹಾಸನದ ಹಿಮ್ಸ್‌ಗೆ ಕರೆತಂದಾಗ ಇಸಿಜಿ ಪರೀಕ್ಷೆಯಲ್ಲಿ ಎದೆ ಭಾಗಕ್ಕೆ ಪೆಟ್ಟಾಗಿರುವುದು ತಿಳಿದು ಬಂದ ಹಿನ್ನಲೆಯಲ್ಲಿ ಹೆಚ್ಚಿನ ತಪಾಸಣೆಗಾಗಿ ವೈದ್ಯರು ಜಯದೇವ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಸೂಚಿಸಿದರು. ಅಪಘಾತದ ರಭಸಕ್ಕೆ ಚಾಲಕನ ಎದೆಗೆ ಸ್ಟೀರಿಂಗ್ ಜೋರಾಗಿ ತಾಗಿದೆ ಎನ್ನಲಾಗಿದೆ.

## ಭಾರತದ ಮೀನಾಕ್ಷಿ-ಜಾಸ್ಮಿನ್‌ಗೆ ಚಿನ್ನದ ಪದಕ






**ಲಿವರ್‌ಪೂಲ್:** ಭಾರತದ ಬಾಕ್ಸರ್‌ಗಳಾದ ಮೀನಾಕ್ಷಿ ಹೂಡಾ ಮತ್ತು ಜಾಸ್ಮಿನ್ ಲಂಬೋರಿಯಾ ಅವರು ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಗೆಲುವು ಸಾಧಿಸುವ ಮೂಲಕ ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಮೀನಾಕ್ಷಿ ಅವರು ಮಹಿಳೆಯರ 48 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಕಜಕಿಸ್ತಾನದ ನಜಿಮ್ ಕೈಜೈಬೆ ಅವರನ್ನು 4-1ರಿಂದ ಮಣಿಸಿ ದ್ದಾರೆ. ಮೀನಾಕ್ಷಿ ಅವರು ಸೆಮಿಫೈನಲ್‌ನಲ್ಲಿ 50 ಯಿಂದ ಎರಡು ಬಾರಿಯ ಏಷ್ಯನ್ ಕಂಚಿನ ಪದಕ ವಿಜೇತೆ ಲೂತ್ಸೈಖನಿ ಅಲ್ತಾಂತ್ ಸೆಟ್ಸೆಗ್ (ಮಂಗೋಲಿಯಾ) ಅವರನ್ನು ಮಣಿಸಿದ್ದರು.

57 ಕೆಜಿ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಜಾಸ್ಮಿನ್ ಲಂಬೋರಿಯಾ ಅವರು 4-1 ರಿಂದ ಪ್ಯಾರಿಸ್ ಒಲಿಂಪಿಕ್ ಬೆಳ್ಳಿ ಪದಕ ವಿಜೇತೆ ಪೋಲೆಂ ಡ್‌ನ ಜೂಲಿಯಾ ಸ್ಜೆರೆಮೆಟಾ ಅವರನ್ನು ಸೋಲಿಸಿದ್ದಾರೆ. ಸೆಮಿ ಫೈನಲ್‌ನಲ್ಲಿ ಜಾಸ್ಮಿನ್ ಅವರು 5-0ರಿಂದ ವೆನೆಜುವೆಲಾದ ಒಮೈಲಿನ್ ಅಲ್ಕಾಲಾ ಅವರನ್ನು ಮಣಿಸಿ, ಪ್ರಶಸ್ತಿ ಸುತ್ತಿಗೆ ಲಗ್ಗೆ ಹಾಕಿದ್ದರು.

ನೂಪುರ್ ಶ್ಯೊರಾನ್ ಮತ್ತು ಪೂಜಾ ರಾಣಿ ಅವರು 80ಕ್ಕೂ ಹೆಚ್ಚು ಕೆ.ಜಿ. ವಿಭಾಗದಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದಾರೆ. ಈ ಮೂಲಕ ಭಾರತದ ಮಹಿಳೆಯರು ನಾಲ್ಕು ಪದಕಗಳನ್ನು ತಮ್ಮದಾಗಿಸಿಕೊಂಡಿದ್ದರೆ.

# ಮಕ್ಕಳು ಪ್ರಜಾಪ್ರಭುತ್ವದ ಮೌಲ್ಯ ಅರಿಯಬೇಕು

• ಪ್ರಜೋದಯ ವರದಿ

**ಆಲೂರು:** ಯುವ ಜನರಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸುವ, ನಾಗರಿಕ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವ ಹಾಗು ಸಂವಿಧಾನಿಕ ಮೌಲ್ಯಗಳನ್ನು ಬಲಪಡಿಸುವ ಉದ್ದೇಶದಿಂದ ರಾಷ್ಟ್ರೀಯ ಪ್ರಜಾ ಪ್ರಭುತ್ವ ದಿನದ ಅಂಗವಾಗಿ ನನ್ನ ಮತ-ನನ್ನ ಹಕ್ಕು ಕಾರ್ಯಕ್ರಮವನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿದೆ ಎಂದು ತಹಶೀಲ್ದಾರ್ ಮಲ್ಲಿಕಾರ್ಜುನ್ ಅವರು ಹೇಳಿದರು.

ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆಯಲ್ಲಿ ಅಂತರ್‌ರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಅಂಗವಾಗಿ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ನನ್ನ ಮತ-ನನ್ನ ಹಕ್ಕು ವಿಷಯ ಕುರಿತು ಏರ್ಪಡಿಸಿದ್ದ ಭಾಷಣ ಸ್ಪರ್ಧೆ, ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು.

ಪ್ರಜಾಪ್ರಭುತ್ವದ ಮೌಲ್ಯಗಳ ಸೃಜನಶೀಲ ಅಭಿವ್ಯಕ್ತಿತ್ವವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸರ್ಕಾರವು ಶಿಕ್ಷಣ ಇಲಾಖೆಯ ನೇತೃತ್ವದಲ್ಲಿ ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟ ದಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಚಿತ್ರ ಕಲೆ ಸ್ಪರ್ಧೆ ಹಮ್ಮಿಕೊಂಡಿದೆ. ವಿದ್ಯಾರ್ಥಿಗಳಿಗೆ ದೈನಂದಿನ ಜೀವನದಲ್ಲಿ ಪ್ರಜಾಪ್ರಭುತ್ವದ ಪಾತ್ರವನ್ನು ಚಿತ್ರಗಳ ಮೂಲಕ ಪ್ರದರ್ಶಿಸುವ ನಿಟ್ಟಿನಲ್ಲಿ ಉನ್ನತ ಶಿಕ್ಷಣ ಇಲಾಖೆಯು ಛಾಯಾ ಚಿತ್ರ ಸ್ಪರ್ಧೆ ಆಯೋಜಿಸುವ ಮೂಲಕ ನನ್ನ ಮತ, ನನ್ನ ಹಕ್ಕು, ಸಂವಿಧಾನದ ಪೀಠಿಕೆ ಮತ್ತು ಮಹಾತ್ಮ ಗಾಂಧೀಜಿ ಅವರ ದೃಷ್ಟಿಕೋನದಲ್ಲಿ ಗಾಂಧಿ ಭಾರತ ಈ ಮೂರು ವಿಷಯಗಳು ಭಾಷಣ ವಿಷಯ ವಸ್ತುವಾಗಿದೆ ಎಂದು ತಿಳಿಸಿದರು.



ತಾಲ್ಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುಬ್ರಹ್ಮಣ್ಯ ಶರ್ಮ ಅವರು ಮಾತನಾಡಿ, ರಾಜ್ಯ ಸರ್ಕಾರ ನನ್ನ ಮತ-ನನ್ನ ಹಕ್ಕು ಎಂಬ ಶೀರ್ಷಿಕೆಯಡಿ ಆಯೋಜಿಸಲು ನಿರ್ದೇಶಿಸಿರುವ ಈ ಕಾರ್ಯಕ್ರಮವು ಸಂವಿಧಾನ ನೀಡಿರುವ ಪ್ರಜಾಪ್ರಭುತ್ವ ಮಹತ್ವ ಅರಿಯಲು ಮತ್ತು ಮತದಾನ ಹಕ್ಕು, ಮೂಲಭೂತ ಕರ್ತವ್ಯಗಳ ಕುರಿತು ಯುವ ಪೀಳಿಗೆಗೆ ಜಾಗೃತಿ ಮೂಡಿಸುವುದಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಪ್ರಜಾ ಪ್ರಭುತ್ವದ ಕುರಿತು ಜಾಗೃತಿ ಮೂಡಿಸಲು ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಚರ್ಚಾಕೂಟ ಮತ್ತು ವಿಚಾರ ಸಂಕಿರಣ, ಪ್ರಜಾ ಪ್ರಭುತ್ವ ಕುರಿತಾದ ಚಿತ್ರಕಲೆ ಸ್ಪರ್ಧೆ ಆಯೋಜಿಸಲಾಗಿತ್ತು. 8-10ನೇ ತರಗತಿ ವಿದ್ಯಾರ್ಥಿಗಳಿಗೆ ಚಿತ್ರಕಲಾ ಮತ್ತು ಪಿಯುಸಿಯಿಂದ ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಪ್ರಜಾ ಪ್ರಭುತ್ವ ಯಶಸ್ವಿಯಲ್ಲಿ ಮತದಾನದ ಪಾತ್ರ ಕುರಿತು ಚರ್ಚಾ ಸ್ಪರ್ಧೆ, ಭಾಷಣ ಸ್ಪರ್ಧೆ ಏರ್ಪಡಿಸಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಕೌಸರ್ ಅಹಮದ್, ಪ್ರಭಾರ ಕ್ಷೇತ್ರ ಸಮನ್ವಯಾಧಿಕಾರಿ ವಿಜಯಕುಮಾರ್, ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಶಕುಂತಲಾ ಶೆಟ್ಟಿ, ಪ್ರಭಾರ ಸರ್ಕಾರಿ ನೂತನ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಭೂಪಾಲಯ್ಯ, ಸಮೂಹ ಸಂಪನ್ಮೂಲ ವ್ಯಕ್ತಿ ಜಯಂತಿ, ಚಿತ್ರಕಲಾ ಶಿಕ್ಷಕ ಬಿ.ಎಸ್. ದೇಸಾಯಿ ಇತರರಿದ್ದರು.

## ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಸಂತ ಜೋಸೆಫ್ ಶಾಲೆ



• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದ ಸುಭಾಷ್ ಮೈದಾನದಲ್ಲಿ ನಡೆದ ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಸಂತ ಜೋಸೆಫ್ ಶಾಲೆಯ ವಿದ್ಯಾರ್ಥಿಗಳು ಅದ್ಭುತ ಪ್ರದರ್ಶನ ನೀಡಿ ಹಲವು ವಿಭಾಗಗಳಲ್ಲಿ ಪ್ರಶಸ್ತಿ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿ ರುವಿನ್ ಎತ್ತರ ಜಿಗಿತದಲ್ಲಿ ಪ್ರಥಮ ಹಾಗು 100 ಮೀಟರ್ ಓಟದಲ್ಲಿ ದ್ವಿತೀಯ ಸ್ಥಾನ ಪಡೆದರೆ, ಸ್ನೇಹ 200 ಮೀ. ಓಟದಲ್ಲಿ ದ್ವಿತೀಯ ಮತ್ತು 100 ಮೀ. ಓಟದಲ್ಲಿ ತೃತೀಯ ಸ್ಥಾನ ಗಳಿಸಿದರು. ಗಿರೀಶ್ 400 ಮೀ. ಓಟದಲ್ಲಿ ಪ್ರಥಮ ಸ್ಥಾನ ಪಡೆದರೆ, ಮನ್ವಿತ್ 800 ಮೀ. ಓಟದಲ್ಲಿ ಪ್ರಥಮ ಸ್ಥಾನ ಪಡೆದರು. ಜಾನ್ಸನ್ ರೇಗೊ 200 ಮೀ. ಓಟದಲ್ಲಿ ದ್ವಿತೀಯ ಸ್ಥಾನ ಗಳಿಸಿದರು.

ಕ್ರಿಸ್ಟನ್ ಡಿಸಿಲ್ವಾ ಉದ್ದ ಜಿಗಿತದಲ್ಲಿ ಪ್ರಥಮ ಸ್ಥಾನ ಪಡೆದು ಕೀರ್ತಿ ತಂದರೆ, ಜೆನಿಕ್ ಜಾವೆಲಿನ್ ತೂರಾಟ ಮತ್ತು ಹ್ಯಾಮರ್ ಥ್ರೋ ಎರಡರಲ್ಲೂ ಪ್ರಥಮ ಸ್ಥಾನ ಪಡೆದರು. ಅಮೋಘ ಕೂಡ ಜಾವೆಲಿನ್ ತೂರಾಟದಲ್ಲಿ ಪ್ರಥಮ ಹಾಗು ಹ್ಯಾಮರ್ ಥ್ರೋದಲ್ಲಿ ದ್ವಿತೀಯ ಸ್ಥಾನ ಪಡೆದರು. ದೀಪ್ತಿ ಶಾಟ್‌ಪುಟ್‌ನಲ್ಲಿ ದ್ವಿತೀಯ ಸ್ಥಾನ ಪಡೆದರೆ, ಬಿಂದುಶ್ರೀ ಜಾವೆಲಿನ್ ತೂರಾಟದಲ್ಲಿ ತೃತೀಯ ಸ್ಥಾನ ಗಳಿಸಿದರು. ಜಯಲಕ್ಷ್ಮಿ 800 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಪಡೆದರೆ, ಬೃಂದಾ ಎತ್ತರ ಜಿಗಿತದಲ್ಲಿ ದ್ವಿತೀಯ ಸ್ಥಾನ ಪಡೆದರು.

ತಂಡ ಸ್ಪರ್ಧೆಗಳಲ್ಲಿಯೂ ಸಂತ ಜೋಸೆಫ್ ವಿದ್ಯಾರ್ಥಿಗಳು ಮಿಂಚಿ, ಬಾಲಕಿಯರ ವಾಲಿಬಾಲ್‌ನಲ್ಲಿ ದ್ವಿತೀಯ ಮತ್ತು 4100 ಮೀ. ರಿಲೇಯಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

# ಬಸವ ಅಭಿಯಾನ ಯಶಸ್ಸಿಗೆ ಮಠಾಧೀಶರ ಮನವಿ

• ಪ್ರಜೋದಯ ವರದಿ

**ಅರಕಲಗೂಡು:** ವಿಶ್ವಕ್ಕೆ ಮಾನವತ್ವದ ಸಂದೇಶ ಸಾರಿದ ಜಗಜ್ಯೋತಿ ಬಸವೇಶ್ವರರ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ದೊಡ್ಡಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಮನವಿ ಮಾಡಿದರು.

ಪಟ್ಟಣದ ದೊಡ್ಡ ಮಠದ ಆವರಣದಲ್ಲಿ ಆಯೋಜಿಸಿದ್ದ ವೀರಶೈವ ಸಮಾಜದ ಮಠಾಧೀಶರು ಹಾಗು ಮುಖಂಡರ ಸಭೆಯ ಸಾನಿಧ್ಯವಹಿಸಿ ಮಾತನಾಡಿ, ರಾಜ್ಯ ಸರ್ಕಾರ ವಿಶ್ವಗುರು ಜಗಜ್ಯೋತಿ ಬಸವೇಶ್ವರರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿ ಒಂದು ವರ್ಷ ಪೂರೈಸಿದೆ. ಈ ಘೋಷಣೆ ಇಡೀ ಮಾನವ ಕುಲಕ್ಕೂ ಹಾಗು ಸಮಾಜಕ್ಕೆ ಹೆಮ್ಮೆಯ ವಿಚಾರ. 12ನೇ ಶತಮಾನದಲ್ಲಿ ಹಾಕಿಕೊಟ್ಟಂತಹ ಮಾದರಿಯಲ್ಲೇ ಈಗಿನ ಸರ್ಕಾರಗಳು ಮುನ್ನಡೆಯಲು ಸಹಕಾರಿಯಾಗಿದೆ. ಅದನ್ನು ಹೆಚ್ಚು ಜನ ಪರವಾಗಿ ಪ್ರಯೋಜನಕಾರಿಯಾಗಿ ಅನುಷ್ಠಾನಕ್ಕೆ ತಂದಾಗ ಸಮಾಜದಲ್ಲಿ ಹೆಚ್ಚಿನ ಸುಧಾರಣೆಯನ್ನು ಕಾಣಲು ಸಾಧ್ಯ. ಕಾಯಕ ತತ್ವದ ಬಸವಣ್ಣ ಅವರ ಆದರ್ಶಗಳನ್ನು ಮುಂದಿನ ಪೀಳಿಗೆಗೆ ಉಳಿಸಬೇಕು. ಈ ನಿಟ್ಟಿನಲ್ಲಿ ಸೆ. 21ರಂದು ಹಾಸನದ ಹಾಸನಾಂಬ ಕಲಾಕ್ಷೇತ್ರದಲ್ಲಿ ಬಸವಣ್ಣನವರ ಸಾಂಸ್ಕೃತಿಕ ಅಭಿಯಾನ ನಡೆಯಲಿದೆ ಎಂದರು.



ಹಳೆಬೀಡು ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಅವರು ಮಾತನಾಡಿ, ಸೆ. 1ರಂದು ಪ್ರಾರಂಭವಾದ ಬಸವ ಜ್ಯೋತಿ ರಥಯಾತ್ರೆ 21ರಂದು ಚಿಕ್ಕಮಗಳೂರಿನಿಂದ ಹಾಸನಕ್ಕೆ ಬರುತ್ತಿದ್ದು, ಜಿಲ್ಲಾಧಿಕಾರಿ ಕಚೇರಿಯಿಂದ ಹಾಸನಾಂಬ ಕಲಾಕ್ಷೇತ್ರದವರೆಗೆ ಮೆರವಣಿಗೆ ಸಾಗಲಿದೆ. ನಂತರ ಪ್ರಮುಖ ಸ್ವಾಮೀಜಿಗಳು ಹಾಗು ಬಸವಣ್ಣನವರ ಅಭಿಮಾನಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಅರಕಲಗೂಡಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಸೇರಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ತಿಳಿಸಿದರು.

ಚಿಲುಮೆ ಮಠದ ಜಯದೇವ ಸ್ವಾಮೀಜಿ, ತೇಜೂರು ಮಠದ ಕಲ್ಯಾಣ ಸ್ವಾಮೀಜಿ, ತಣ್ಣೀರುಹಳ್ಳ ಮಠದ ವಿಜಯಕುಮಾರ ಸ್ವಾಮೀಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ನವಿಲೆ ಪರಮೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್, ಯುವ ಘಟಕದ ಅಧ್ಯಕ್ಷ ಚಂದ್ರಶೇಖರ್, ಪಪಂ ಮಾಜಿ ಅಧ್ಯಕ್ಷ ಲೋಕೇಶ್, ಮುಖಂಡರಾದ ಶಿವಣ್ಣ, ಪಂಚಾಕ್ಷರಿ, ವಿರೂಪಾಕ್ಷ, ಈರೇಗೌಡ, ಜಗದೀಶ, ಸುಂದ್ರೇಶ್, ವೇದಮೂರ್ತಿ ಇತರರಿದ್ದರು.

# ಕಾನೂನು ಅರಿವು ಹೊಂದುವುದು ಎಲ್ಲರ ಜವಾಬ್ದಾರಿ

• ಪ್ರಜೋದಯ ವರದಿ

**ಬಾಣಾವರ:** ಉತ್ತಮ ಬದುಕಿಗೆ ಕಾನೂನಿನ ಅರಿವು ಅತ್ಯಗತ್ಯವಿದ್ದು ಪ್ರಜ್ಞಾವಂತ ಯುವಕರು ನಮ್ಮ ಸಂವಿಧಾನ ಹಾಗು ಕಾನೂನು ಅರಿಯಬೇಕೆಂದು ತಾಲ್ಲೂಕು ಜೆಎಂಎಫ್‌ಸಿ ನ್ಯಾಯಾಲಯ ಹಿರಿಯ ನ್ಯಾಯಾಧೀಶ ಕಿರಣ್ ಕುಮಾರ್ ಡಿ.ವಡಿಗೇರಿ ಅವರು ಹೇಳಿದರು.

ಶಾನೆಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಸವನಹಳ್ಳಿ ಗ್ರಾಮದಲ್ಲಿ ರಾಜ್ಯ ಹಾಗು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಆಯೋಜಿಸಿದ್ದ ಕಾನೂನು ಅರಿವು-ನೆರವು ಹಾಗು ಪೌಷ್ಟಿಕ ಆಹಾರ ಸಪ್ತಾಹ ಉದ್ಘಾಟಿಸಿ ಮಾತನಾಡಿ, ಅಪೌಷ್ಟಿಕತೆ ಎಂಬುದು ಕೇವಲ ಆಹಾರ ಒಂದ ರಿಂದ ಬರುವುದಿಲ್ಲ, ಬಾಲ್ಯ ವಿವಾಹದಿಂದಲೂ ಬರುವ ಸಾಧ್ಯತೆ ಇರುತ್ತದೆ. ಏಕೆಂದರೆ 18 ವರ್ಷಕ್ಕಿಂತ ಮುಂಚೆಯೇ ಹೆಣ್ಣು ಮಕ್ಕಳನ್ನು ವಿವಾಹ ಮಾಡಿಕೊಡುವುದರಿಂದ ಅವರ ದೇಹವು ಬಲಿಷ್ಠವಾಗಿರುವುದಿಲ್ಲ. ವಿವಾಹವಾದ ನಂತರ ಜನಿಸುವ ಮಗುವು ಕೂಡ ಅಪೌಷ್ಟಿಕತೆಯಿಂದ ಜನಿಸುತ್ತದೆ. ಆದ್ದ ರಿಂದ 18 ವರ್ಷ ತುಂಬಿದ ಬಳಿಕ ಹೆಣ್ಣು ಮಕ್ಕಳಿಗೆ ಮದುವೆ ಮಾಡಬೇಕು ಎಂದರು.




ಬಾಣಾವರ ಪಿಎಸ್‌ಐ ಸಿ.ಎಸ್. ಸುರೇಶ್ ಅವರು ಮಾತನಾಡಿ, ಸಮಸ್ಯೆಗಳಿಗೆ ಪೊಲೀಸ್ ಠಾಣೆ ಮತ್ತು ನ್ಯಾಯಾಲಯದ ಮೆಟ್ಟಿಲೇರುವುದೇ ಪರಿಹಾರವಲ್ಲ, ಹಳ್ಳಿಗಳಲ್ಲಿ ಒಬ್ಬರಿಗೊಬ್ಬರು ಸಹಕರಿಸಿ ಕೊಂಡು ಸಹಬಾಳ್ವೆಯ ಜೀವನ ನಡೆಸಬೇಕು. ಅದರಿಂದ ಸಮಾಜ ಸ್ವಾಸ್ಥ್ಯವಾಗಿರುತ್ತದೆಂದು ತಿಳಿಸಿದರು.

ವಕೀಲ ಟಿ.ಟಿ.ವಿರೂಪಾಕ್ಷಪ್ಪ ಅವರು ಮಾತನಾಡಿ, ಎಷ್ಟೋ ಸಾರ್ವಜನಿಕರಿಗೆ ಕಾನೂನಿನಲ್ಲಿ ಇರುವ ಹಲವಾರು ಉಪಯುಕ್ತ ಮಾಹಿತಿಗಳು ತಿಳಿದೇ ಇಲ್ಲ. ನ್ಯಾಯಾಲಯಗಳಿಂದ ಖಾಯಂ ಜನತಾ ನ್ಯಾಯಾಲಯ ಹಾಗು ತಾಲ್ಲೂಕು ಕಾನೂನು ಸೇವಾ ಸಮಿತಿ ಜಾರಿಗೊಳಿಸಲಾಗಿದೆ. ಅದರಿಂದ ಬಡವರು ಹಾಗೂ ಮಧ್ಯಮ ವರ್ಗದವರು ಕೂಡ ಹಲವಾರು ತೊಂದರೆಗಳನ್ನು ಅನುಭವಿಸುತ್ತಿರುವ ಸಾರ್ವಜನಿಕರಿಗೆ ಉಚಿತವಾಗಿ ಈ ಸಮಿತಿಗಳ ಮೂಲಕ ವಕೀಲರನ್ನು ನೇಮಿಸಿ ನಿಮ್ಮ ಪರವಾಗಿ ದಾಖಲೆಗಳು ಸರಿಯಾಗಿದ್ದಲ್ಲಿ ನ್ಯಾಯ ದೊರಕಿಸಿ ಕೊಡುತ್ತವೆ ಎಂದರು.

ಶಾನೆಗೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಜಯರಾಮ್, ಮಾಜಿ ಉಪಾಧ್ಯಕ್ಷೆ ಮಮತಾ ಮಂಜುನಾಥ್, ವಕೀಲರ ಸಂಘದ ಅಧ್ಯಕ್ಷ ಸದಾನಂದ, ಕಾರ್ಯದರ್ಶಿ ಎಸ್.ಪ್ರಕಾಶ್, ವಕೀಲರಾದ ನವೀನ್ ನಾಯಕ್, ಬಿ.ಎಂ. ಪ್ರಕಾಶ್, ಹೆಚ್.ಲಾವಣ್ಯ, ನ್ಯಾಯಾಂಗ ಇಲಾಖೆ ಶಿರಸ್ತೇದಾರ ಸದಾಶಿವಪ್ಪ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಯೋಗೇಶ್ ಮತ್ತಿತರರಿದ್ದರು.

## ಕಚ್ಚಾ ತೈಲ, ಅನಿಲ ಆಮದು ಕಡಿತಕ್ಕೆ ಕೇಂದ್ರ ಮುಂದು

» ಮೊದಲನೇ ಪುಟದಿಂದ

ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ ಅವರು, ಭಾರತವು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಲ್ಲಿ ಒಂದಾಗಿ ಹೊರಹೊಮ್ಮುತ್ತಿರುವಾಗ, ಕಚ್ಚಾ ತೈಲ ಮತ್ತು ಅನಿಲಕ್ಕಾಗಿ ವಿದೇಶಿ ರಾಷ್ಟ್ರಗಳ ಮೇಲೆ ದೇಶ ಅವಲಂಬಿತವಾಗಿದೆ ಎಂದು ತಿಳಿಸಿದರು.

ಇದನ್ನು ಬದಲಾಯಿಸಲು ನಮ್ಮ ಇಂಧನ ಅವಶ್ಯಕತೆಗಳನ್ನು ಪೂರೈಸುವತ್ತ ಗಮನಹರಿಸಬೇಕು. ಸರ್ಕಾರ ತೈಲ ಅನ್ವೇಷಣೆ ಮತ್ತು ಹಸಿರು ಶಕ್ತಿ ಉತ್ಪಾದನೆಯತ್ತ ಕಾರ್ಯೋನ್ಮುಖವಾಗಿರುವುದಾಗಿ ಹೇಳಿದರು.

ಎಥೆನಾಲ್ ಶಕ್ತಿಯ ಪ್ರಮುಖ ಪರ್ಯಾಯ ಮೂಲವಾಗಿದೆ. ನುಮಲಿಗಢದಲ್ಲಿ ಹೊಸದಾಗಿ ಉದ್ಘಾಟನೆಗೊಂಡ ಜೈವಿಕ ಎಥೆನಾಲ್ ಸಂಸ್ಕರಣಾಗಾರ ರೈತರು ಮತ್ತು ಬುಡಕಟ್ಟು ಜನಾಂಗದವರಿಗೆ ಗಣನೀಯವಾಗಿ ಪ್ರಯೋಜನ ನೀಡುತ್ತದೆ ಎಂದು ಪಾಲಿಪ್ರೊಪಿಲೀನ್ ಸ್ಥಾವರಕ್ಕೆ ಅಡಿಪಾಯ ಹಾಕಿದ್ದು, ಸ್ಥಳೀಯ ಆರ್ಥಿಕತೆಗೆ ಹೆಚ್ಚು ಪ್ರಯೋಜನವಾಗಲಿದೆ ಎಂದು ಅವರು ಹೇಳಿದರು. ಶಕ್ತಿ ಮತ್ತು ಸೆಮಿ ಕಂಡಕ್ಟರ್‌ಗಳು ಆತ್ಮನಿರ್ಭರ್ ಭಾರತ್‌ಗೆ ಎರಡು ಪ್ರಮುಖ ಚಾಲಕಗಳಾಗಿವೆ. ಈ ಕ್ಷೇತ್ರಗಳಲ್ಲಿ ಅಸ್ಸಾಂ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂದರು. ಅಸ್ಸಾಂನಲ್ಲಿ ದಂಗೆ ಮತ್ತು ಅಶಾಂತಿಗೆ ಕಾಂಗ್ರೆಸ್ ಕಾರಣವಾಗಿದೆ ಎಂದು ಆರೋಪಿಸಿದ ಪ್ರಧಾನಿ ಮೋದಿ, ಅಸ್ಸಾಂ ಅನ್ನು ವ್ಯಾಪಾರ ಮತ್ತು ಪ್ರವಾಸೋದ್ಯಮದ ಕೇಂದ್ರವನ್ನಾಗಿ ಮಾಡುವುದಕ್ಕೆ ಬಿಜೆಪಿ ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

# ಏತ ನೀರಾವರಿ ಯೋಜನೆಗಾಗಿ ವೈಯಕ್ತಿಕ ಹಣ ವಿನಿಯೋಗ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ರೈತರ ಹಿತದೃಷ್ಟಿಯಿಂದ 40ಕ್ಕೂ ಹೆಚ್ಚು ಕೆರೆಕಟ್ಟೆಗಳನ್ನು ಏತ ನೀರಾವರಿ ಯೋಜನೆಗಳ ಮೂಲಕ ತುಂಬಿಸಲು ವೈಯಕ್ತಿಕ ಹಣ ಖರ್ಚು ಮಾಡಿ ಯೋಜನೆ ರೂಪಿಸಿದ್ದೇನೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಹೋಬಳಿಯ ಕಲ್ಕೆರೆ ಕೆರೆಯಿಂದ ಅಯ್ಯಾರಹಳ್ಳಿ ಕೆರೆಗೆ ಪೈಪ್ ಲೈನ್ ಮೂಲಕ ನೀರು ಹರಿಸುವ ಯೋಜನೆಗೆ ಭಾನುವಾರ ಚಾಲನೆ ನೀಡಿ ಮಾತನಾಡಿ, ನಾನು ಈ ಹಿಂದೆ ಕೊಟ್ಟ ಮಾತಿನಂತೆ ನುಗ್ಗೇಹಳ್ಳಿ ಏತ ನೀರಾವರಿ ಯೋಜನೆ ಮೂಲಕ ಕಲ್ಕೆರೆ, ದೇವಿಗೆರೆ, ಕೆ.ಚೌಡೇನಹಳ್ಳಿ ಕೆರೆಗಳನ್ನು ತುಂಬಿಸಲಾಗಿದೆ. ಕಲ್ಕೆರೆ ಕೆರೆಯಿಂದ ಅಯ್ಯಾರಹಳ್ಳಿ ಕೆರೆಗೆ ಪೈಪ್‌ಲೈನ್ ಮೂಲಕ ಮೋಟಾರ್ ಅಳವಡಿಸಿ ನೀರು ತುಂಬಿಸುವ ಸಲುವಾಗಿ 12 ಲಕ್ಷ ರೂ.



ಖರ್ಚು ಮಾಡಿ ಯೋಜನೆ ರೂಪಿ ಸಲಾಗಿದೆ. ಇಂದು ಅಧಿಕೃತವಾಗಿ ಯೋಜನೆಗೆ ಚಾಲನೆ ನೀಡಲಾಗಿದೆ ಎಂದರು.

ವಿರೋಧ ಪಕ್ಷಗಳ ನಾಯಕರ ಟೀಕೆಗಳಿಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ನನಗೆ ಬೇಕಾಗಿ ರುವುದು ರೈತರ ಹಿತದೃಷ್ಟಿ ಮಾತ್ರ. ಆ ನಿಟ್ಟಿನಲ್ಲಿ ಕೆಲಸ ಮಾಡಿದ್ದರಿಂದಲೇ ಶಾಸಕನಾಗಿ ಪುನರಾ ಯ್ಕೆಯಾಗುತ್ತಿದ್ದೇನೆಂದರು.

ನುಗ್ಗೇಹಳ್ಳಿ ಏತ ನೀರಾವರಿ ಯೋಜನೆ ಸಂಪೂರ್ಣವಾಗಿ ಯಶಸ್ವಿಗೊಂಡಿದ್ದು ಕಳೆದ 6 ವರ್ಷ ಗಳಿಂದ ಈ ಭಾಗದ ಕೆರೆಗಳಿಗೆ ನೀರು ಹರಿಸಲಾಗುತ್ತದೆ. ಸದ್ಯ ಜಂಬೂರು ಕೆರೆಗೆ ನೀರು ಹರಿಸಲಾ ಗುತ್ತಿದ್ದು ಮುಂಬರುವ ದಿನಗಳಲ್ಲಿ ನುಗ್ಗೇಹಳ್ಳಿ ಕೆರೆ ಸಂಪೂರ್ಣವಾಗಿ ಭರ್ತಿಯಾದ ಮೇಲೆ ಚನ್ನನಕಟ್ಟೆಕೆರೆ, ತಾವರೆಕೆರೆ ಕೆರೆಗಳಿಗೆ ನೀರು ಹರಿಸಲಾಗುತ್ತದೆ. ತಾಲ್ಲೂಕಿನಲ್ಲಿ ಈಗಾಗಲೇ ಶೇ. 85ರಷ್ಟು ನೀರಾವರಿ ಯೋಜನೆಗಳು ಪೂರ್ಣಗೊಂಡು ಯಶಸ್ವಿಯಾಗಿವೆ ಎಂದರು.

ಉದ್ಯಮಿ ಅಣತಿ ಯೋಗೇಶ್, ವಿ.ಎನ್.ಮಂಜುನಾಥ್, ಕಲ್ಕೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷ ವಾಸು, ಕೃಷಿ ಪತ್ತಿನ ಅಧ್ಯಕ್ಷ ಅಶೋಕ್, ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಡಿ.ಕೆ.ಹರೀಶ್, ವಕೀಲ ಡಿ.ಬಿ.ಬಸವರಾಜ್, ಉಪನ್ಯಾಸಕ ಯೋಗೀಶ್ ಇತರರಿದ್ದರು.


## Document Lost

Sri B.E Somashekharappa S/o Eshwarappa, Banavara Village, Banavara gram Panchayath, Arasikere Taluk, Hassan District, Who Owned property "151600202400101021" Bank Mortagage deed No "BAN-1-02356-2014-15" relating to this property deed lost in Bus stand. So if anyone has got the Original Copy & deed document please hand it over to this Mobile No **"9900587429"** please contact.


ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

C M Y K C M Y K C M Y K C M Y K